28 April 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಅವಶ್ಯಕತೆಗಳು ಕಡಿಮೆ, ಹೆಚ್ಚು ಹೊಂದಾಣಿಕೆ, ಇವು ಸಂತೋಷದಿಂದಿರಲು ಬದುಕಿನ ಸೂತ್ರಗಳು!

-ಸ್ನೇಹಾ ಆನಂದ್

info.varthaman@gmail.com



15 ದಿನ ಭೂಗತ ಕೇಬಲಿಂಗ್ ಕಾಮಗಾರಿ ಸ್ಥಗಿತಕ್ಕೆ ಸೂಚನೆ ಪುಟ ಸಂ. 2



ಪಿಡಿಒ ಅಮಾನತ್ತುಗೊಳಿಸಲು ಜಿ.ಪಂ.ಸಿಇಒಗೆ ಮನವಿ ಪುಟ ಸಂ. 3



ಸಂಪನ್ನಗೊಂಡ ವರದರಾಜಸ್ವಾಮಿ ಬ್ರಹ್ಮರಥೋತ್ಸವ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 157 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಪೊಲೀಸರಿಗೆ ಹೈಕೋರ್ಟ್ ತರಾಟೆ

**ಬೆಂಗಳೂರು:** ರಾಜ್ಯ ಪೊಲೀಸರ ವಿಚಿತ್ರ ನಡೆ ಹಾಗೂ ಕಾರ್ಯವೈಖರಿಯ ಬಗ್ಗೆ ಹೈಕೋರ್ಟ್ ಮತ್ತೊಮ್ಮೆ ಕೆಂಡಾಮಂಡಲವಾಗಿದೆ. ಪೊಲೀಸರು ಏನು ಬೇಕಾದರೂ ಮಾಡಿಬಿಡುತ್ತೀರಿ. ಆದರೆ ನಿಜವಾದ ಅಪರಾಧಗಳ ಬಗ್ಗೆ ತನಿಖೆ ಮಾಡುವುದನ್ನು ಬಿಟ್ಟು ಜನರನ್ನು ಅಲೆದಾಡಿಸುತ್ತೀರಿ ಎಂದು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಚನ್ನಪಟ್ಟಣದ ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ 2024ರಲ್ಲಿ ಎರಡು ಹಸುಗಳು ನಾಪತ್ತೆ ಆಗಿದ್ದವು. ಆದರೆ 2 ವರ್ಷಗಳ ನಂತರ 2026ರಲ್ಲಿ ಪೊಲೀಸರು ದೂರುದಾರನ ನೆರೆಮನೆಯವರ ವಿರುದ್ಧ ಎಫ್ಐಆರ್ ದಾಖಲಿಸಿದ್ದರು. ತಮ್ಮ ಮೇಲೆ ದಾಖಲಾದ ಎಫ್ಐಆರ್ ರದ್ದುಗೊಳಿಸಬೇಕೆಂದು ಕೋರಿ ಆರೋಪಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ಸೋಮವಾರ ನಡೆಯಿತು.


ವಿಚಾರಣೆ ಸಂದರ್ಭದಲ್ಲಿ ಹಸುಗಳು ಪತ್ತೆಯಾಗಿಲ್ಲ ಎಂಬ ಕಾರಣಕ್ಕೆ ಪೊಲೀಸರು ಒಂದು ಇಡೀ ಕುಟುಂಬದ ವಿರುದ್ಧವೇ ಪ್ರಕರಣ ದಾಖಲಿಸಿದ್ದಕ್ಕೆ ಸಿಟ್ಟಾದ ನ್ಯಾಯಾಲಯ, ಜನರು ದೂರು ನೀಡಲು ಪೊಲೀಸ್ ಠಾಣೆಗೆ ನೂರು ಬಾರಿ ಅಲೆಯಬೇಕಾಗುತ್ತದೆ. ಅಷ್ಟಾದರೂ ನೀವು ಎಫ್ಐಆರ್ ದಾಖಲಿಸುವುದಿಲ್ಲ. ಆದರೆ ಎರಡು ವರ್ಷಗಳ ಹಿಂದೆ ಹಸು ಕಾಣೆಯಾಗಿದೆ ಎಂದ ತಕ್ಷಣ ಇಡೀ ಕುಟುಂಬದ ಮೇಲೆ ಪ್ರಕರಣ ದಾಖಲಿಸುತ್ತೀರಿ. ಇದು ಕಾನೂನಿನ ಸ್ಪಷ್ಟ ದುರ್ಬಳಕೆ ಎಂದು ತರಾಟೆಗೆ ತೆಗೆದುಕೊಂಡಿತು. ರಾಜ್ಯ ಸರ್ಕಾರ ಮತ್ತು ಪೊಲೀಸರು ಸಮಾಜದಲ್ಲಿ ನಡೆಯುತ್ತಿರುವ ಗಂಭೀರ ಮತ್ತು ನೈಜ ಅಪರಾಧಗಳ ಬೆನ್ನತ್ತಬೇಕು. ದೂರು ನೀಡಲು ಬರುವ ಜನರನ್ನು ಅಲೆದಾಡಿಸುವ ಪ್ರವೃತ್ತಿ ನಿಲ್ಲಬೇಕು ಎಂದು ಜಡ್ಜ್ ಕಿಡಿಕಾರಿದರು.



## ಮೇನಲ್ಲಿ ಸಿಹಿ ಸುದ್ದಿ: ಅಶೋಕ ಪಟ್ಟಣ

**ಬೆಂಗಳೂರು:** ಮೇ ಎರಡನೇ ಅಥವಾ ಮೂರನೇ ವಾರಕ್ಕೆ ಸಿಹಿಸುದ್ದಿ ಕೊಡ್ತೇವೆಂದು ಹೈಕಮಾಂಡ್ ನಾಯಕರು ಹೇಳಿದ್ದಾರೆಂದು ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ನಾವು ದೆಹಲಿಗೆ ಹೋಗಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದೇವೆ. ಮಲ್ಲಿಕಾರ್ಜುನ ಖರ್ಗೆ ಅವರೂ ನಮ್ಮ ಜೊತೆ ಮಾತನಾಡಿದ್ದಾರೆ ಎಂದರು. ಮತ್ತೊಂದು ಸಭೆ ಸೇರಲು ಶಾಸಕರು ಒತ್ತಾಯಿಸುತ್ತಿದ್ದಾರೆ. ಉಪಚುನಾವಣೆ ಫಲಿತಾಂಶದ ಬಳಿಕ 40 ಜನ ಮತ್ತೆ ಹೈಕಮಾಂಡ್ ನಾಯಕರ ಭೇಟಿಗೆ ಹೋಗುತ್ತೇವೆ. ಡಿಕೆಶಿಗೆ ಹೈಕಮಾಂಡ್ ಹುಟ್ಟುಹಬ್ಬದ ಕೊಡುಗೆ ನೀಡುವ ವಿಚಾರದ ಬಗ್ಗೆ ಕೇಳಿದ ಪ್ರಶ್ನೆಗೆ 'ಗಿಫ್ಟ್ ಕೊಡೋದು, ಬಿಡೋದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಡಿಕೆಶಿಯ ವರಿಗೆ ಅಡ್ವಾನ್ಸ್ ಹ್ಯಾಪಿ ಬರ್ತ್ ಡೇ ಹೇಳ್ತೇನೆ ಎಂದರು.



## ಚಿನ್ನಸ್ವಾಮಿಯಲ್ಲಿ ಮತ್ತೆ ಭದ್ರತಾ ವೈಫಲ್ಯ

### ಸಿಬ್ಬಂದಿಗೆ ವೇತನ ನೀಡದ್ದಕ್ಕೆ 240 ಸಿಸಿಟಿವಿ ಕೇಬಲ್ ಕಟ್!

**ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯದ ದಿನವೇ 240ಕ್ಕೂ ಹೆಚ್ಚು ಸಿಸಿಟಿವಿ ಕೇಬಲ್‌ಗಳನ್ನು ಕತ್ತರಿಸಿದ ಆಘಾತಕಾರಿ ಪ್ರಕರಣದಲ್ಲಿ ಸ್ಫೋಟಕ ಮಾಹಿತಿ ಹೊರಬಿದ್ದಿದೆ. ಈ ವಿಧ್ವಂಸಕ ಕೃತ್ಯದ ಹಿಂದೆ ಯಾವುದೇ ಸಂಚು ಅಥವಾ ಬೆಟ್ಟಿಂಗ್ ದಂಧೆ ಕೈವಾಡವಿಲ್ಲ. ಬದಲಾಗಿ ಸಂಬಳ ನೀಡದ ಕೋಪವಿತ್ತು ಎಂಬುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಳೆದ ಏಪ್ರಿಲ್ 24 ರಂದು ರಾಯಲ್ ಚಾಲೆಂಜರ್ಸ್ ಮತ್ತು ಗುಜರಾತ್ ಟೈಟಾನ್ಸ್ ನಡುವೆ ಐಪಿಎಲ್ ಪಂದ್ಯ ನಡೆದಿತ್ತು. ಈ ಪಂದ್ಯದ ಭದ್ರತೆಗಾಗಿ ಹಾಕಿದ್ದ ಸಿಸಿಟಿವಿ ಕ್ಯಾಮೆರಾಗಳ ಕೇಬಲ್‌ಗಳನ್ನು ಉದ್ದೇಶಪೂರ್ವಕವಾಗಿ ಕತ್ತರಿಸಿ ಹಾಳು ಮಾಡಲಾಗಿತ್ತು. 35 ಸಾವಿರ ಪ್ರೇಕ್ಷಕರು ಸೇರುವ ಕ್ರೀಡಾಂಗಣದಲ್ಲಿ ಇಂತಹ ಕೃತ್ಯ ಎಸಗಿರುವುದು ಭಾರೀ ಭದ್ರತಾ ಲೋಪವನ್ನು ಎತ್ತಿ ತೋರಿಸಿತ್ತು.

ಈ ಕೃತ್ಯ ಎಸಗಿದ ಆರೋಪಿಗಳಾದ ಶ್ರೀನಿವಾಸ ಮತ್ತು ಅಬ್ದುಲ್ ಕಲಾಂ ಅವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಸತ್ಯ ಹೊರಬಿದ್ದಿದೆ. ಕ್ರೀಡಾಂಗಣದಲ್ಲಿ ಸಿಸಿಟಿವಿ ಮತ್ತು ಕೇಬಲ್ ಅಳವಡಿಕೆ ಸಬ್ ಕಾಂಟ್ರಾಕ್ಟ್ ಪಡೆದಿರುವ ಐವಿಎಸ್ ಡಿಜಿಟಲ್ ಸೊಲ್ಯೂಷನ್ಸ್ ಕಂಪನಿ ಸಿಬ್ಬಂದಿಯಾಗಿದ್ದರು. ಕಂಪನಿಯು ಈ ಇಬ್ಬರು ಸಿಬ್ಬಂದಿಗೆ ಕೆಲ ತಿಂಗಳುಗಳಿಂದ ಸಂಬಳ ನೀಡಿರಲಿಲ್ಲ. ಸಂಬಳ ಕೇಳಿದರೂ ಸಿಗದಿದ್ದಕ್ಕೆ ಕೋಪಗೊಂಡು ಕಂಪನಿಗೆ ಮತ್ತು ಕ್ರೀಡಾಂಗಣದ ಆಡಳಿತ ಮಂಡಳಿಗೆ ಪಾಠ ಕಲಿಸಲು ನಿರ್ಧರಿಸಿದ್ದರು. ಪುಟ 2ಕ್ಕೆ



# ಉಗ್ರನಿಗೆ 10 ವರ್ಷ ಕಠಿಣ ಶಿಕ್ಷೆ

## ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ । ಎನ್ಐಎ ಕೋರ್ಟ್ ಆದೇಶ

**ಬೆಂಗಳೂರು:** ಕರಾವಳಿಯನ್ನು ಬೆಚ್ಚಿ ಬೀಳಿಸಿದ್ದ ಮಂಗಳೂರು ನಗರದಲ್ಲಿ ಆಟೋದಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರಿಕ್ ನನ್ನು ದೋಷಿ ಎಂದು ಬೆಂಗಳೂರಿನ ಎನ್ಐಎ ವಿಶೇಷ ಕೋರ್ಟ್ ಸೋಮವಾರ ಘೋಷಿಸಿದೆ. ಉಗ್ರನಿಗೆ 10 ವರ್ಷ ಕಠಿಣ ಶಿಕ್ಷೆ ವಿಧಿಸಿ ಮಹತ್ವದ ತೀರ್ಪು ನೀಡಿದೆ.

ಸೆಕ್ಷನ್ 121 ಎ, ಸೆಕ್ಷನ್ 122, ಸೆಕ್ಷನ್ 326 ಹಾಗೂ ಯುಎಪಿಎ ಸೇರಿದಂತೆ ಹಲವು ಸೆಕ್ಷನ್‌ಗಳ ಅಡಿಯಲ್ಲಿ ಕೋರ್ಟ್ 10 ವರ್ಷ ಕಠಿಣ ಶಿಕ್ಷೆ ಮತ್ತು 10 ಸಾವಿರ ದಂಡ ವಿಧಿಸಿದೆ. ಕೋರ್ಟ್‌ಗೆ ಮೂರು ತಿಂಗಳ ಹಿಂದೆ ಶಾರಿಕ್ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದ. ಶಾರಿಕ್ ಅರ್ಜಿ ಪುರಸ್ಕರಿಸಿದ್ದ ಎನ್ಐಎ ಸ್ಪೆಷಲ್ ಕೋರ್ಟ್ ಸೋಮವಾರ ಅಪರಾಧಿಗೆ ಶಿಕ್ಷೆ ಪ್ರಕಟಿಸಿದೆ.

ನನಗೆ ಒಬ್ಬ ಮಗಳಿದ್ದಾಳೆ. ಮನೆಯಲ್ಲಿ ದುಡಿಯುವವನು ನಾನೊಬ್ಬನೇ. ಹೀಗಾಗಿ ಶಿಕ್ಷೆ ಕಡಿಮೆ ಮಾಡುವಂತೆ ಶಾರಿಕ್ ಮನವಿ ಮಾಡಿದ್ದಾನೆ. ಅಲ್ಲದೇ, ಶಿವಮೊಗ್ಗ ಜೈಲಿಗೆ ಶಿಫ್ಟ್ ಮಾಡುವಂತೆಯೂ ಶಾರಿಕ್ ಮನವಿ ಮಾಡಿದ್ದಾನೆ.

ಜೈಲಿಗೆ ಸೇರಿ ಮೂರು ವರ್ಷ ಆಯ್ತು. ಔಷಧಿ ಎಲ್ಲಾ ಸರಿಯಾಗಿ ತೆಗೆದುಕೊಳ್ಳಲು ಆಗ್ತಾ ಇಲ್ಲ.. ಕುಟುಂಬವನ್ನು ಭೇಟಿ ಮಾಡಲು ಸಾಧ್ಯವಾಗ್ತಿಲ್ಲ. ಹೀಗಾಗಿ, ಶಿವಮೊಗ್ಗ ಜೈಲಿಗೆ ಶಿಫ್ಟ್ ಮಾಡಲು ಶಾರಿಕ್ ಕೋರ್ಟ್ ಮುಂದೆ ಬೇಡಿಕೊಂಡಿದ್ದ. ಇದನ್ನು ಪುರಸ್ಕರಿಸದ ನ್ಯಾಯಾಧೀಶರು ಬೆಂಗಳೂರಿನಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲಾ ಸೌಲಭ್ಯ ಇದೆ. ಶಿವಮೊಗ್ಗಕ್ಕಿಂತ ಚೆನ್ನಾಗಿಯೇ ಇದೆ ಎಂದು ಮನವಿಯನ್ನು ತಿರಸ್ಕರಿಸಿದರು.

ಮಂಗಳೂರಿನ ಕಂಕನಾಡಿ ಬಳಿ ಆಟೋರಿಕ್ಷಾದಲ್ಲಿ 2022ರ ನವೆಂಬರ್ 19ರಂದು ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು. ಆರೋಪಿ ಶಾರಿಕ್ ಬಾಂಬ್ ಹೊತ್ತು ಸಾಗಿಸುತ್ತಿದ್ದಾಗಲೇ ಅದು ಆಕಸ್ಮಿಕವಾಗಿ ಸ್ಫೋಟಗೊಂಡಿದ್ದರಿಂದ ಭಾರಿ ಅನಾಹುತ ತಪ್ಪಿತ್ತು.

ಸ್ಫೋಟದಲ್ಲಿ ಶಾರಿಕ್ ಮತ್ತು ಆಟೋ ಚಾಲಕ ಇಬ್ಬರೂ ಗಾಯಗೊಂಡಿದ್ದರು. ದೇಶದ ಭದ್ರತೆಗೆ ಧಕ್ಕೆ ತರುವ ಸಂಚು ರೂಪಿಸಿದ ಹಿನ್ನೆಲೆಯಲ್ಲಿ ಪ್ರಕರಣವನ್ನು ಎನ್ಐಎ ತನಿಖೆಗೆ ವಹಿಸಲಾಗಿತ್ತು. ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಎನ್ಐಎ ಕೋರ್ಟ್, ಐಪಿಸಿ ಸೆಕ್ಷನ್ 121ಎ, ಐಪಿಸಿ ಸೆಕ್ಷನ್ 326 ಹಾಗೂ ಭಯೋತ್ಪಾದನಾ ಚಟುವಟಿಕೆಗಳ ತಡೆ ಕಾಯ್ದೆಯಡಿ ಕಠಿಣ ಶಿಕ್ಷೆ ವಿಧಿಸಿದೆ. ಈ ಪ್ರಕರಣದಲ್ಲಿ ಶಾರಿಕ್ ತನ್ನ ಮೇಲಿರುವ ಎಲ್ಲಾ ಆರೋಪಗಳನ್ನು ಮತ್ತು ಮಾಡಿದ ತಪ್ಪನ್ನು ನ್ಯಾಯಾಲಯದ ಮುಂದೆ ಒಪ್ಪಿಕೊಂಡಿದ್ದ.






### ಜೀವಾವಧಿ ಶಿಕ್ಷೆ ಆಗಬೇಕಿತ್ತು: ಸ್ಫೋಟ ಸಂತ್ರಸ್ತ ಆಟೋ ಚಾಲಕ

**ಮಂಗಳೂರು:** ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಉಗ್ರ ಶಾರಿಕ್ 10 ವರ್ಷ ಜೈಲು ಶಿಕ್ಷೆಗೆ ಒಳಗಾಗಿರುವ ಬಗ್ಗೆ ಸ್ಫೋಟದಲ್ಲಿ ಗಾಯಗೊಂಡಿದ್ದ ಆಟೋ ಚಾಲಕ ಪುರುಷೋತ್ತಮ ಪೂಜಾರಿ ಪ್ರತಿಕ್ರಿಯೆ ನೀಡಿದ್ದಾರೆ.

ಉಗ್ರನಿಗೆ ಹತ್ತು ವರ್ಷ ಅಲ್ಲ ಜೀವಾವಧಿ ಶಿಕ್ಷೆ ನೀಡಬೇಕಿತ್ತು. ಜೈಲಿನಿಂದ ಹೊರ ಬಂದ ನಂತರ ಮತ್ತೆ ಅಂತಹದ್ದೇ ಕೃತ್ಯದಲ್ಲಿ ಭಾಗಿಯಾಗುತ್ತಾನೆ. ಅವನಿಗೆ ಹಿಂದಿನಿಂದ ಸಹಾಯ ಮಾಡುವವರು ಇದ್ದಾರೆ. ಹಣಕ್ಕಾಗಿ ಏನು ಬೇಕಾದರೂ ಮಾಡುವ ವ್ಯಕ್ತಿಗಳು. ಯಾವುದೇ ಕೃತ್ಯ ನಡೆಯೋದಿಲ್ಲ ಎಂದು ಅಭಿಪ್ರಾಯಪಟ್ಟರು.

ಮಾಡದ ತಪ್ಪಿಗಾಗಿ ನಾನು ಶಿಕ್ಷೆ ಅನುಭವಿಸುತ್ತಿದ್ದೇನೆ. ಮೂರು ವರ್ಷದಿಂದ ನರಕ ಯಾತನೆ ಅನುಭವಿಸಿದ್ದೇನೆ. ಆಟೋದಲ್ಲೇ ಬಾಂಬ್ ಸ್ಫೋಟ ಆಗಿರುವುದರಿಂದ ನನಗೊಬ್ಬನಿಗೇ ತೊಂದರೆಯಾಯಿತು. ಇಲ್ಲದಿದ್ದಲ್ಲಿ ಸಾಕಷ್ಟು ಮಂದಿ ಸಾವಿಗೆ ಕಾರಣವಾಗುತ್ತಿತ್ತು. ಆರೋಪಿಗೆ ಜೀವಾವಧಿ ಶಿಕ್ಷೆ ನೀಡಿದರೆ ಒಳ್ಳೆಯದಿತ್ತು ಆಟೋ ಚಾಲಕ ಹೇಳಿದರು.

## ಡಿಕೆಶಿಗೆ ಹೈಕಮಾಂಡ್ 'ಬರ್ತ್ ಡೇ ಗಿಫ್ಟ್'

### ಮೇ 15ರೊಳಗೆ ಸಿಹಿ ಸುದ್ದಿ: ಶಾಸಕ ಡಾ.ರಂಗನಾಥ್ ಆಶಯ

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ಮತ್ತೆ ನಾಯಕತ್ವ ಬದಲಾವಣೆ ಚರ್ಚೆ ಮುನ್ನೆಲೆಗೆ ಬಂದಿದೆ. ಮೇ 15ರಂದು ಡಿ.ಕೆ. ಶಿವಕುಮಾರ್ ಅವರ ಜನ್ಮದಿನ. ಅಷ್ಟರೊಳಗೆ ಅವರಿಗೆ ಸಿಹಿ ಸುದ್ದಿ ಬರಬಹುದು ಎಂಬ ಆಶಯ ನಮ್ಮದಾಗಿದೆ ಎಂದು ಶಾಸಕ ಡಾ.ರಂಗನಾಥ್ ತಿಳಿಸಿದ್ದಾರೆ.

ಈ ಮೂಲಕ ರಾಜ್ಯ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಶೀಘ್ರದಲ್ಲೇ ಒಳ್ಳೆಯ ಸ್ಥಾನ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಸಿಎಂ ಸ್ಥಾನ ಬದಲಾವಣೆ ವದಂತಿಗಳಿಗೆ ಪರೋಕ್ಷವಾಗಿ ಪುಷ್ಟಿ ನೀಡಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ಡಾ.ರಂಗನಾಥ್, ನಾವು ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ಫಲಾಫಲಗಳನ್ನು ದೇವರಿಗೆ ಬಿಡಬೇಕು. ಅದೇ ರೀತಿ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಜವಾಬ್ದಾರಿ ಹೊತ್ತು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಮುಂಬರುವ ದಿನಗಳಲ್ಲಿ ಒಳ್ಳೆಯ ಸ್ಥಾನ ಸಿಗಬೇಕು ಎನ್ನುವುದು ನಮ್ಮೆಲ್ಲರ ನಿರೀಕ್ಷೆಯಾಗಿದೆ. ಹೈಕಮಾಂಡ್ ಈ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ ಎಂಬ ವಿಶ್ವಾಸ ನಮಗಿದೆ. ಎಲ್ಲದಕ್ಕೂ ಕಾಲ ಬರಬೇಕು. ಕಾಲಾಯ ತಸ್ಮೈ ನಮಃ ಎಂದು ಅವರು ಮಾರ್ಮಿಕವಾಗಿ ನುಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಒಪ್ಪಂದದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಅಂತಹ ಒಂದು ಒಪ್ಪಂದವಾಗಿದೆ ಎಂಬ ವಿಚಾರ ಎಲ್ಲರ ತಲೆಯಲ್ಲೂ ಇದೆ. ಆದರೆ, ಆ ಒಪ್ಪಂದದ ಸ್ವರೂಪ ಏನು ಎಂಬುದನ್ನು ಹೈಕಮಾಂಡ್ ಸ್ಪಷ್ಟಪಡಿಸಬೇಕು. ಈ ಮೂಲಕ ಹೈಕಮಾಂಡ್ ಸದ್ಯ ಇರುವ ಗೊಂದಲವನ್ನು ಬಗೆಹರಿಸಬೇಕು. ಇದನ್ನು ನಾವಷ್ಟೇ ಅಲ್ಲ, ಎಲ್ಲರೂ ಹೇಳುತ್ತಿದ್ದಾರೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರು ಪ್ರಸ್ತುತ ಒಳ್ಳೆಯ ಆಡಳಿತ ನೀಡುತ್ತಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್ ಅವರಿಗೂ ಮುಖ್ಯಮಂತ್ರಿ ಸ್ಥಾನ ಸಿಗಬೇಕು ಎನ್ನುವುದು ನಮ್ಮ ಆಸೆ. ಹೈಕಮಾಂಡ್ ಏನೇ ನಿರ್ಧಾರ ತಗೊಂಡರೂ ನಾವು ಅದಕ್ಕೆ ಬದ್ಧರಾಗಿರುತ್ತೇವೆ. ವರಿಷ್ಠರು ಸೂಕ್ತ ನಿರ್ಧಾರ ತಗೊಳ್ಳುತ್ತಾರೆ ಎಂಬ ವಿಶ್ವಾಸವಿದೆ.

ಸಂಪುಟ ಪುನಾರಚನೆಯಾಗಬೇಕು ಎಂಬ ಬೇಡಿಕೆ ಕೆಲವರಿಂದ ಕೇಳಿಬರುತ್ತಿದೆ. ಈಗಾಗಲೇ ಒಂದು ತಂಡ ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿ ಮಾಡಿ ಬಂದಿದೆ. ಇನ್ನೊಂದು ತಂಡವೂ ದೆಹಲಿಗೆ ಹೋಗುವ ಸಾಧ್ಯತೆಯಿದೆ ಎಂದು ಸಂಪುಟ ಬದಲಾವಣೆಯ ಸೂಚನೆ ನೀಡಿದರು. ಪುಟ 2ಕ್ಕೆ





## ವಿಶ್ವನಾಥ್‌ಗೆ ಅರಳು-ಮರಳು

### ವಯಸ್ಸಿಗೆ ಬೆಲೆ ಕೊಟ್ಟು ಕ್ಷಮಿಸಿ ಬಿಡೋಣ: ಮಧು ಬಂಗಾರಪ್ಪ

**ಶಿವಮೊಗ್ಗ:** ಮಾಜಿ ಸಚಿವ ಎಚ್.ವಿಶ್ವನಾಥ್ ಅವರಿಗೆ ವಯಸ್ಸಾಗಿದೆ. ಅವರು ಮಕ್ಕಳು ಇದ್ದಂತೆ. ಹೀಗಾಗಿ ಏನೇನೊ ಬಡಬಡಿಸುತ್ತಾರೆ. ಅವರಿಗೆ ಅರಳು-ಮರಳು ಎಂದು ಹೇಳಬಹುದೇ? ಆದರೂ ವಯಸ್ಸಿಗೆ ಬೆಲೆ ಕೊಟ್ಟು ಕ್ಷಮಿಸಿ ಬಿಡೋಣ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಲೇವಡಿ ಮಾಡಿದರು.ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತ ನಾಡಿದ ಅವರು, ಪರೀಕ್ಷಾ ಕೇಂದ್ರದಲ್ಲಿ ವೆಬ್ ಕ್ಯಾಸ್ಟಿಂಗ್ ಸ್ಥಗಿತಗೊಳಿಸಿ ಕಾಪಿ ಹೊಡೆಸುವ ಮೂಲಕ ಪುಟ 2ಕ್ಕೆ



## ಹಾಸ್ಟೆಲ್‌ನಲ್ಲಿ ರ್‍ಯಾಗಿಂಗ್: ವಿದ್ಯಾರ್ಥಿಗಳ ಮಾರಾಮಾರಿ

**ಹಾಸನ:** ನಗರದ ಪಶು ವೈದ್ಯಕೀಯ ಕಾಲೇಜಿನ ಹಾಸ್ಟೆಲ್‌ನಲ್ಲಿ ರ್‍ಯಾಗಿಂಗ್ ವಿಚಾರಕ್ಕೆ ಹಿರಿಯ ಮತ್ತು ಕಿರಿಯ ವಿದ್ಯಾರ್ಥಿಗಳ ನಡುವೆ ಮಾರಾಮಾರಿ ನಡೆದಿದೆ.

ಹಾಸ್ಟೆಲ್ ನ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ರ್‍ಯಾಗಿಂಗ್ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಇದನ್ನು ಪ್ರಶ್ನಿಸಿದ ಕಿರಿಯ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದಾರೆ. ಗಲಾಟೆಯಲ್ಲಿ ಹಲವು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.


ಹಲ್ಲೆಗೊಳಗಾದ ವಿದ್ಯಾರ್ಥಿಗಳು ಕಾಲೇಜಿನ ಡೀನ್ ನಟರಾಜ್ ಅವರಿಗೆ ದೂರು ನೀಡಿದ್ದಾರೆ. ದೂರು ಆಧರಿಸಿ ತನಿಖೆಗೆ ಸಮಿತಿ ರಚಿಸಲಾಗುವುದು. ಕಮಿಟಿ ನೀಡುವ ವರದಿ ಆಧರಿಸಿ ಕ್ರಮಕೈಗೊಳ್ಳಲು ಕಾಲೇಜು ಆಡಳಿತ ಮಂಡಳಿ ನಿರ್ಧರಿಸಿದೆ. ಹಾಸನ ಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ಹಾರ್ಮುಜ್ ತೆರೆಯಲು ಸಿದ್ಧ: ಇರಾನ್ ಹೊಸ ಪ್ರಸ್ತಾಪ

**ಟೆಹ್ರಾನ್:** ಮಧ್ಯ ಪ್ರಾಚ್ಯ ಸಂಘರ್ಷವನ್ನು ಕೊನೆಗೊಳಿಸಲು ಮತ್ತು ವಿಶ್ವದ ಪ್ರಮುಖ ವ್ಯಾಪಾರ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಪೂರ್ಣ ಪ್ರಮಾಣದಲ್ಲಿ ತೆರೆಯಲು ತಾವು ಸಿದ್ಧ ಎಂದು ಇರಾನ್ ತಿಳಿಸಿದೆ.

ಅತ್ಯಂತ ವಿವಾದಾತ್ಮಕವಾಗಿರುವ ಮತ್ತು ಸಂಘರ್ಷದ ಕೇಂದ್ರಬಿಂದುವಾಗಿರುವ ಪರಮಾಣು ಕಾರ್ಯಕ್ರಮದ ಕುರಿತಾದ ಚರ್ಚೆಗಳನ್ನು ಸದ್ಯಕ್ಕೆ ಬದಿಗಿಟ್ಟು, ನಂತರದ ಹಂತದಲ್ಲಿ ಮಾತುಕತೆ ನಡೆಸೋಣ ಎಂಬ ನಿಲುವನ್ನು ಇರಾನ್ ತಳೆದಿದೆ. ಈ ಮೂಲಕ ಸದ್ಯದ ಉದ್ವಿಗ್ನತೆಯನ್ನು ತಣ್ಣಗಾಗಿಸುವುದು ಇರಾನ್‌ನ ತಂತ್ರವಾಗಿದೆ ಎನ್ನಲಾಗಿದೆ.

ಇರಾನ್ ಈ ಹಿಂದಿನ ಪ್ರಸ್ತಾಪದಲ್ಲಿ ಅಮೆರಿಕ ವಿಧಿಸಿರುವ ಆರ್ಥಿಕ ನಿರ್ಬಂಧಗಳನ್ನು ತೆಗೆದುಹಾಕುವುದು ಮತ್ತು ಜಪ್ತಿ ಪುಟ 2ಕ್ಕೆ




## ರಾಜನಾಥ್ ಸಿಂಗ್ ಮುಂದಿನ ರಾಷ್ಟ್ರಪತಿ?

**ನವದೆಹಲಿ:** ರಕ್ಷಣಾ ಸಚಿವ ರಾಜನಾಥ್ ಸಿಂಗ್ ದೇಶದ ಮುಂದಿನ ರಾಷ್ಟ್ರಪತಿ ಆಗಲಿದ್ದಾರೆ ಎಂಬ ಚರ್ಚೆ ಮುನ್ನೆಲೆಗೆ ಬಂದಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಜೂನ್ 2027ರಲ್ಲಿ ಭಾರತದ ರಾಷ್ಟ್ರಪತಿಯಾಗಿ ನೇಮಕ ಮಾಡಲಾಗುವುದು. ರಾಷ್ಟ್ರಪತಿ ಭವನಕ್ಕೆ ರಾಜನಾಥ್ ಸಿಂಗ್ ಹೆಸರನ್ನು ಶಿಫಾರಸು ಮಾಡಲು ಆರ್‌ಎಸ್‌ಎಸ್ ಕೂಡ ಹೆಚ್ಚಿನ ಆಸಕ್ತಿ ವಹಿಸಿದೆ ಎನ್ನಲಾಗಿದೆ.

ಉತ್ತರ ಪ್ರದೇಶದಲ್ಲಿ 2027ರ ವಿಧಾನಸಭಾ ಚುನಾವಣೆಯನ್ನು ಯೋಗಿ ಆದಿತ್ಯನಾಥ್ ನೇತೃತ್ವದಲ್ಲಿ ಎದುರಿಸಲಾಗುವುದು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಘೋಷಿಸಿದ್ದರಿಂದ ಬ್ರಾಹ್ಮಣ ಸಮುದಯ ಅಸಮಾಧಾನಗೊಂಡಿದೆ. ಬಿಜೆಪಿ ರಾಜ್ಯಾಧ್ಯಕ್ಷ ಪಂಕಜ್ ಚೌಧರಿ ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆ. ಹೀಗಾಗಿ ರಾಜನಾಥ್ ಸಿಂಗ್ ಅವರನ್ನು ರಾಷ್ಟ್ರಪತಿಯನ್ನಾಗಿ ನೇಮಕ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.



## ಪಂಚಮಸಾಲಿ ಮಠದಲ್ಲಿ ಭಾರೀ ಹೈಡ್ರಾಮಾ

### ಟ್ರಸ್ಟ್ ಬೆಂಬಲಿಗರ ಮೇಲೆ ಹಲ್ಲೆ, ಘೋಷಣೆ, ಭಾರೀ ಗಲಾಟೆ

**ದಾವಣಗೆರೆ:** ಹರಿಹರ ಪಂಚಮಸಾಲಿ ಪೀಠದ ಆವರಣದಲ್ಲಿ ಭಾರೀ ಹೈಡ್ರಾಮಾ ನಡೆದಿದೆ. ಪೀಠದ ಟ್ರಸ್ಟ್ನ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ಲೆಕ್ಕ ಮಂಡನೆ ಸಂದರ್ಭದಲ್ಲಿ ಗಲಾಟೆಯಾಗಿದೆ. ಸ್ವಾಮೀಜಿ ಬೆಂಬಲಿಗರಿಗೆ ಟ್ರಸ್ಟಿನ ಬೆಂಬಲಿಗರು ನಿಂದಿಸಿದ್ದಾರೆ. ಇದಕ್ಕೆ ಸ್ವಾಮೀಜಿ ಬೆಂಬಲಿಗರು ಟ್ರಸ್ಟ್ ಬೆಂಬಲಿಗರ ಮೇಲೆ ಹಲ್ಲೆ ನಡೆಸಿದ್ದಾರೆ.

ಲೆಕ್ಕ ಕೇಳೋರು ಇಷ್ಟು ದಿನ ಎಲ್ಲಿ ಹೋಗಿದ್ದೀರಿ ಎಂದು ಟ್ರಸ್ಟ್ ಬೆಂಬಲಿಗರು ನಿಂದಿಸಿದ್ದಾರೆ. ಇದರಿಂದ ಆಕ್ರೋಶಗೊಂಡ ಸ್ವಾಮೀಜಿ ಬೆಂಬಲಿಗರು ವಿಜಯನಗರ ಸಂಘಟನಾ ಕಾರ್ಯದರ್ಶಿ ಶಿವನಗೌಡ ಮೇಲೆ ಹಲ್ಲೆ ನಡೆಸಿದ್ದಾರೆ. ಪೊಲೀಸರು ಮಧ್ಯೆ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

ಗಲಾಟೆ, ಧಿಕ್ಕಾರ ಘೋಷಣೆ ಮಧ್ಯೆ ಪ್ರಧಾನ ಧರ್ಮದರ್ಶಿ ಉಮಾಪತಿ ಲೆಕ್ಕ ಕೊಟ್ಟಿದ್ದಾರೆ. 2008ರಿಂದ 2026ರವರೆಗಿನ ಲೆಕ್ಕಾಚಾರವನ್ನು ತೆರೆದಿಟ್ಟಿದ್ದಾರೆ. 2008ರಿಂದ 2026ರವರೆಗೆ 27.61 ಕೋಟಿ ರೂ. ಜಮಾ ಆಗಿದೆ ಎಂದು ಮಾಹಿತಿ ನೀಡಿದರು.

ಇನ್ನೊಂದೆಡೆ ಲೆಕ್ಕಪತ್ರ ಮಂಡನೆ ಮಾಡುವುದಕ್ಕೆ ವಚನಾನಂದ ಸ್ವಾಮೀಜಿ ಬೆಂಬಲಿಗರ ವಿರೋಧ ವ್ಯಕ್ತಪಡಿಸಿದರು. ತರಾತುರಿಯಲ್ಲಿ ಲೆಕ್ಕ ಪತ್ರ ಮಂಡನೆ ಮಾಡೋದು ಸಮಂಜಸವಲ್ಲ. ಮೂರು ತಿಂಗಳ ಕಾಲಾವಕಾಶ ಪಡೆದು ವಿಸ್ತಾರವಾದ ಲೆಕ್ಕಪತ್ರ ವರದಿ ಮಂಡನೆ ಮಾಡಬೇಕು. ಮೊದಲು ಪೀಠಕ್ಕೆ ಕಾಣಿಕೆ ನೀಡಿದ ಭಕ್ತರ ಪಟ್ಟಿ ಬಿಡುಗಡೆ ಮಾಡಬೇಕು. ನಂತರ ಸರ್ಕಾರದಿಂದ ಬಂದ ಅನುದಾನದ ಪಿನ್ ಟೂ ಪುಟ 2ಕ್ಕೆ



# ಹಿರಿಯರಿಗೂ ಸಚಿವ ಸ್ಥಾನ ಸಿಗಲಿ

## ಅಧಿಕಾರ ಹಂಚಿಕೆ ಹೈಕಮಾಂಡ್ ತೀರ್ಮಾನಕ್ಕೆ: ದಿನೇಶ ಗುಂಡೂರಾವ್

**ಹುಬ್ಬಳ್ಳಿ:** ಪಕ್ಷದಲ್ಲಿ ಸಾಕಷ್ಟು ಮಂದಿ ಹಿರಿಯರು, ಅನುಭವಿಗಳೂ ಇದ್ದಾರೆ. ಅವರಿಗೂ ಅವಕಾಶ ದೊರೆಯಬೇಕು. ತಾವೊಬ್ಬರೇ ಕಾಯಂ ಸಚಿವರಾಗಿರಬೇಕು ಎಂದೇನಿಲ್ಲ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಸರ್ಕಾರ ಬಂದು ಈಗಾಗಲೇ ಮೂರು ವರ್ಷ ಸಮೀಪಿಸುತ್ತಿದೆ. ಸಚಿವ ಸಂಪುಟ ಪುನರ್ ರಚನೆಯಾಗಿ, ಉಳಿದವರಿಗೂ ಅಲ್ಲಿ ಅವಕಾಶ ಸಿಗಬೇಕು. ಈ ಕುರಿತು ಪಕ್ಷದ ವರಿಷ್ಠರು ಮತ್ತು ಮುಖ್ಯಮಂತ್ರಿ ಸೂಕ್ತ ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿದೆ. ಶೀಘ್ರದಲ್ಲಿಯೇ ಜಾರಿಗೆ ಬರಲಿದೆ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಸಚಿವ ಸ್ಥಾನ ಕಳೆದುಕೊಳ್ಳುವವರು ಅವಮಾನ ಎಂದು ಭಾವಿಸಬಾರದು. ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವ ದೊಡ್ಡತನ ಇಟ್ಟುಕೊಂಡಿರಬೇಕು. ನಾವೆಲ್ಲ ಪಕ್ಷದ ಶಿಸ್ತಿನ ಸಿಪಾಯಿಗಳು. ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನವನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತೇವೆ ಎಂದು ತಿಳಿಸಿದರು.

ಅಧಿಕಾರ ಹಂಚಿಕೆ ತೀರ್ಮಾನ ಹೈಕಮಾಂಡ್ ಅಂಗಳದಲ್ಲಿದೆ. ಅವರು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆ ತೀರ್ಮಾನಕ್ಕೆ ಡಿಸಿಎಂ, ಸಚಿವರು ಹಾಗೂ ಶಾಸಕರು ಬದ್ಧರಾಗಿರುತ್ತಾರೆ. ಬೇರೆ ಯಾರೂ ಮಧ್ಯಪ್ರವೇಶಿಸುವ ಅಗತ್ಯವಿಲ್ಲ ಎಂದು ಹೇಳಿದರು.

ಪಕ್ಷದಲ್ಲಿ ಗೊಂದಲವಿದೆ ಎನ್ನುವ ಸಚಿವ ಜಾರಕಿಹೊಳಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಗುಂಡೂರಾವ್, ನಮ್ಮಲ್ಲಿ ಗೊಂದಲವಿಲ್ಲ. ಪುಟ 2ಕ್ಕೆ



### ವೈದ್ಯರ ನೇಮಕಾತಿ ಶೀಘ್ರ

**ಹುಬ್ಬಳ್ಳಿ:** ರಾಜ್ಯದಲ್ಲಿ 125 ವೈದ್ಯರ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ. ಒಳಮೀಸಲಾತಿ ಅನ್ವಯ ಶೀಘ್ರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 1,300 ಶುಶ್ರೂಷಕರ ನೇಮಕ ಮಾಡಿಕೊಳ್ಳಲು ಅವಕಾಶವಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿರಬೇಕು ಎನ್ನುವ ನಿಟ್ಟಿನಲ್ಲಿ ಕೆಲವು ಮೂಲ ಸೌಕರ್ಯಗಳನ್ನು ಒದಗಿಸಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಸರ್ಕಾರಿ ಔಷಧಗಳೇ ಸಿಗಬೇಕು ಎನ್ನುವ ಉದ್ದೇಶದಿಂದ, ಪುಟ 2ಕ್ಕೆ

## ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಸಂಸ್ಥಾಪನಾ ದಿನ



ಮೈಸೂರು: ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಇಂದು ಬ್ಯಾಂಕಿನ 120ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಹಾಗೂ ಜಗಜ್ಯೋತಿ ಶ್ರೀ ಬಸವಣ್ಣರವರ ಜಯಂತಿಯನ್ನು ಆಚರಿಸಲಾಯಿತು.

ಸಂಘದ ಅಧ್ಯಕ್ಷ ಜೆ.ಯೋಗೇಶ್ ಮಾತನಾಡಿ, ಶತಮಾನ ಪೂರೈಸಿದ ಮೈಸೂರಿನ ಐತಿಹಾಸಿಕ ಹಿನ್ನೆಲೆಯುಳ್ಳ ನಮ್ಮ ಸಂಘದ ಏಳಿಗೆಗೆ ಶ್ರಮಿಸಿದ ಮಹನೀಯರನ್ನು ಸ್ಮರಿಸುವ ದಿನ ಇದಾಗಿದೆ. ಅವರು ಹಾಕಿಕೊಟ್ಟ ದಾರಿಯಲ್ಲಿ ನಾವೆಲ್ಲರೂ ಸಾಗುವ ಮೂಲಕ ಸದಸ್ಯರೆಲ್ಲರ ಹಿತವನ್ನು ಕಾಯುವ ನಿಟ್ಟಿನಲ್ಲಿ ಸಂಘ ಮುನ್ನಡೆ ಸಾಧಿಸುತ್ತಿರುವುದು ನಮ್ಮೆಲ್ಲರ ಹೆಮ್ಮೆಯ ವಿಚಾರ ಎಂದು ಹೇಳಿದರು.

ಸಂಘದ ಉಪಾಧ್ಯಕ್ಷರಾದ ಟಿ.ರವಿ, ನಿರ್ದೇಶಕರಾದ ಎಸ್.ಬಿ.ಎಂ.ಮಂಜು, ಎನ್. ಯೋಗಾನಂದ, ಹೆಚ್.ಹರೀಶ್.ಕುಮಾರ್, ಆರ್.ಸೋಮಣ್ಣ, ಕೆ.ಗಿರೀಶ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಿ.ರಾಜೇಶ್ವರಿ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡ ಇತರರು ಇದ್ದರು.

# ಭಾರತದ ಸಂವಿಧಾನ ಜಗತ್ತಿನಲ್ಲಿಯೇ ಶ್ರೇಷ್ಠವಾದದ್ದು

### ವಕೀಲ ಪುಟ್ಟಸ್ವಾಮಿ ಹೇಳಿಕೆ । ರಾಮಸಮುದ್ರದಲ್ಲಿ ಅದ್ದೂರಿ ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ



ಚಾಮರಾಜನಗರ, ನಗರದ 30ನೇ ವಾರ್ಡನ ಚಿಕ್ಕ ಬೀದಿಯಲ್ಲಿ ಜೈ ಭೀಮ್ ಯುವಜನ ಸಂಘದ ವತಿಯಿಂದ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ರವರ 135ನೇ ಜಯಂತೋತ್ಸವ ಪ್ರಯುಕ್ತ ಅವರ ಭಾವಚಿತ್ರ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಬೀದಿಯ ಡಾ.ಬಿ.ಆರ್.ಅಂಬೇಡ್ಕರ್ ಭವನ ಮುಂಭಾಗದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ ರಾಮಸಮುದ್ರ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬದುಕು, ಜೀವನಶೈಲಿ, ಅವರ ಕೊಡುಗೆಗಳು ಎಲ್ಲರಿಗೂ ಸ್ಫೂರ್ತಿ. ಅವರ ಕೊಡುಗೆ ಭಾರತ ಜನತೆಯ ಒಂದು ರೀತಿ ಜೀವನಾಡಿ ಇದ್ದಂತೆ. ಅವರ ಕೊಡುಗೆಗಳಿಂದಲೇ ಇಂದು ದೇಶದ ಎಲ್ಲ ಜನತೆಗೆ ಸಮಾನತೆ, ಹಕ್ಕು, ಕರ್ತವ್ಯ, ಪ್ರಗತಿಯ ಕನಸು ಎಲ್ಲವೂ ದೊರೆತಿದೆ ಎಂದರು.

ಡಾ.ಬಿ.ಅರ್.ಅಂಬೇಡ್ಕರ್ ಅವರ ವಿವಿಧ ದೇಶಗಳ ಸಂವಿಧಾನ ಅಧ್ಯಯನ ಮಾಡಿ ದೇಶಕ್ಕೆ ಶ್ರೇಷ್ಠ ಸಂವಿಧಾನ ಬರೆದುಕೊಡುವ ಮೂಲಕ ಸರ್ವರಿಗೂ ಸಮಾನ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅವರ ಶಿಕ್ಷಣ ಮಹತ್ವವನ್ನು ಸಾರಿದರು ಆಗಾಗಿ ಸಮುದಾಯ ಪ್ರತಿಯೊಬ್ಬರೂ ಶಿಕ್ಷಣ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಚಿಕ್ಕಬೀದಿಯಲ್ಲಿ ಮರೆವಣಿಗೆ ಮಾಡಲಾಯಿತು. ಅಂಬೇಡ್ಕರ್ ಜಯಂತೋತ್ಸವ ಪ್ರಯುಕ್ತ ಬೀದಿಯನ್ನು ವಿದ್ಯುತ್ ದೀಪಗಳಿಂದ, ಹಸಿರುತೋರಣಗಳಿಂದ ಅಲಂಕರಿಸಲಾಗಿತು. ಮೆರವಣಿಗೆ ಹಾದು ಹೋಗುವ ರಸ್ತೆಗಳಲ್ಲಿ ಬಣ್ಣಬಣ್ಣದ ಚಿತ್ತಾರಬಿಟ್ಟು ಸ್ವಾಗತಿಸಲಾಯಿತು.

ಮೆರವಣಿಗೆಯಲ್ಲಿ ನಗರಸಭಾ ಮಾಜಿ ಉಪಾಧ್ಯಕ್ಷ ಆರ್.ಎಂ.ರಾಜಪ್ಪ, ಮಾಜಿ ಸದಸ್ಯ ಬಸವರಾಜು, ಯಜಮಾನರಾದ ಪಾಪಣ್ಣ, ಮರಿಸ್ವಾಮಿ, ವೀರಭದ್ರ, ಪರಶಿವ, ಚೇತನ್ ಮಾಜಿ ಯಜಮಾನ ಮಹಾದೇವಸ್ವಾಮಿ, ಜೈಭೀಮ್ ಯುವಜನ ಸಂಘದ ಅಧ್ಯಕ್ಷ ಆರ್.ನಾಗಣ್ಣ, ಉಪಾಧ್ಯಕ್ಷ ಜಯಕುಮಾರ್, ಕಾರ್ಯದರ್ಶಿ ಮಹೇಶ್ ಕುಮಾರ್, ಪದಾಧಿಕಾರಿಗಳಾದ ಮಾಣಿಕ್ಯ, ಚೂರಿ, ಬೆಳ್ಳಿ, ರಮೇಶ್, ಸಿದ್ದರಾಜು, ಅಭಿ, ಆನಂದ್, ಆದರ್ಶ, ಪ್ರಸನ್ನ ಅಭಿ, ಪ್ರಜ್ವಲ್, ಆಟೋ ರಾಜು, ಲೋಕೇಶ್, ಸಿ. ಎಂ.ನಾಗರಾಜು ಮುಖಂಡರಾದ ನಾಗಬಸವಣ್ಣ, ಮಹದೇವಸ್ವಾಮಿ, ಸುರೇಶ್, ಎಂಸ್ಯಾಡ್ ಮಹದೇವಸ್ವಾಮಿ, ಎಂಸ್ಯಾಡ್ ಶಂಕರ್ ಇತರರು ಭಾಗವಹಿಸಿದ್ದರು.

# ರಾಮನಗರದಲ್ಲಿ ಶ್ರೀ ವಾಸವಿ ಜಯಂತಿ

### ಪ್ರಥಮ ದಿನ 108 ಲೀಟರ್ ಹಾಲಿನ ಅಭಿಷೇಕ, ದ್ವಿತೀಯ ದಿನ ಜೇನು ತುಪ್ಪ ಅಭಿಷೇಕ, ತೃತೀಯ ದಿನ ಎಳನೀರು ಅಭಿಷೇಕ ಮತ್ತು ಬಗೆಬಗೆಯ ಹೂವುಗಳಿಂದ ಪುಷ್ಪಾಭಿಷೇಕ





ರಾಮನಗರ: ನಗರದ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ದೇವಾಲಯದಲ್ಲಿ ಭಾನುವಾರ ವಾಸವಿ ಜಯಂತಿ ಆಚರಣೆ ಸಂಪನ್ನವಾಯಿತು.

ಕಳೆದ ನಾಲ್ಕು ದಿನಗಳಿಂದ ಶ್ರೀ ವಾಸವಿ ಜಯಂತಿ ಅಂಗವಾಗಿ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕೈಂಕರ್ಯಗಳು ನೆರವೇರಿದವು. ಶ್ರೀಮಾತೆಯ ಮೂರ್ತಿಗೆ ಪ್ರಥಮ ದಿನ 108 ಲೀಟರ್ ಹಾಲಿನ ಅಭಿಷೇಕ, ದ್ವಿತೀಯ ದಿನ ಜೇನು ತುಪ್ಪ ಅಭಿಷೇಕ, ತೃತೀಯ ದಿನ ಎಳನೀರು ಅಭಿಷೇಕ ಮತ್ತು ಬಗೆಬಗೆಯ ಹೂವುಗಳಿಂದ ಪುಷ್ಪಾಭಿಷೇಕವೂ ನೆರವೇರಿತು. ಪ್ರತಿ ದಿನ ಬಗೆಬಗೆಯ ಹೂವುಗಳಿಂದ ಅಲಂಕಾರ, ಹೋಮ ಇತ್ಯಾದಿ ಧಾರ್ಮಿಕ ಕೈಂಕರ್ಯಗಳು ಅತ್ಯಂತ ಭಕ್ತಿ ಮತ್ತು ಶ್ರದ್ದೆಯಿಂದ ನೆರವೇರಿತು.

ಭಾನುವಾರ ಶ್ರೀ ವಾಸವಿ ಜಯಂತಿಯ ದಿನ ಬೆಳಿಗ್ಗೆ ಸುಪ್ರಭಾತ ಸೇವೆ, ಎಲ್ಲ ದೇವತಾಮೂರ್ತಿಗಳಿಗೆ ಪಂಚಾಮೃತ ಅಭಿಷೇಕ ನಂತರ ಹೂವಿನ ವಿಶೇಷ ಅಲಂಕಾರ ನೆರವೇರಿತು. ಬೆಳಿಗ್ಗೆ ನಗರದ ಪ್ರಮುಖ ಬೀದಿಗಳಲ್ಲಿ ಶ್ರೀಮಾತೆಯ ಕೈ ಉತ್ಸವ ನಡೆಯಿತು. ಈ ವೇಳೆ ಆರ್ಯ ವೈಶ್ಯ ಸಮುದಾಯದ ಹಿರಿಯರು, ಯುವಕರು, ಯುವತಿಯರು, ಮಹಿಳೆಯರು ಸಾಂಪ್ರದಾಯಿಕ ಉಡುಗೆ ತೊಟ್ಟು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸಂಜೆ ವೈಭವಪೂರ್ಣ ಪಲ್ಲಕ್ಕಿ ಉತ್ಸವ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ಆರ್ಯ ವೈಶ್ಯ ಸಮುದಾಯದವರು ನೆಲಸಿದ್ದು, ಆ ದಿನ ತಮ್ಮ ಊರುಗಳಲ್ಲಿರುವ ವಾಸವಿ ದೇವಾಲಯಗಳಲ್ಲಿ ವಿಶೇಷ ಆಚರಣೆಯನ್ನು ನೆರವೇರಿಸಿದ್ದಾರೆ. ರಾಮನಗರದ ಆರ್ಯ ವೈಶ್ಯ ಸಭಾ, ವಾಸವಿ ವನಿತಾ ಸಂಘ ಮತ್ತು ವಾಸವಿ ಯೂತ್ಸ್ ಫೋರಂ ಸಂಘಟನೆಗಳು ಶ್ರೀ ವಾಸವಿ ಜಯಂತಿ ಆಚರಣೆಯಲ್ಲಿ ತೊಡಗಿಸಿಕೊಂಡಿದ್ದವು.

#### ತಂಬಿಟ್ಟಿನ ಆರತಿ

ಆರ್ಯ ವೈಶ್ಯ ಸಮುದಾಯದ ಕುಲದೇವತೆ ಶ್ರೀ ಕನ್ಯಕಾ ಪರಮೇಶ್ವರಿ ಅಮ್ಮನವರು. ಶ್ರೀ ವಾಸವಿ ಮಾತೆ ಅಂತಲೂ ಪೂಜಿಸುತ್ತಾರೆ. ಪ್ರತಿ ವರ್ಷ ವೈಶಾಖ ಮಾಸ ಶುದ್ದ ದಶಮಿಯಂದು ವಾಸವಿ ಜಯಂತಿಯನ್ನು ಆಚರಿಸುವುದು ವಾಡಿಕೆ. ಈ ದಿನ ಆರ್ಯ ವೈಶ್ಯ ಸಮುದಾಯದ ಸುಮಂಗಲಿಯರು ತಂಬಿಟ್ಟಿನ ಆರತಿ ಬೆಳಗಿ ತಮ್ಮ ಭಕ್ತಿಯನ್ನು ನಿವೇದಿಸಿಕೊಳ್ಳುತ್ತಾರೆ.

ಈ ಬಾರಿ ಸಾಂಪ್ರದಾಯಿಕವಾಗಿ ರಚಿಸಲ್ಪಡುವ ತಂಬಿಟ್ಟಿನ ಆರತಿಯನ್ನು ಕೆಲವರು ವಿಭಿನ್ನವಾಗಿ ರಚಿಸಿದ್ದರು.

ಆಕರ್ಷಕವಾಗಿ ಮತ್ತು ಅರ್ಥಪೂರ್ಣವಾಗಿ ರಚಿಸಲಾಗಿದ್ದ ತಂಬಿಟ್ಟಿನ ಆರತಿಗಳಿಗೆ ವಾಸವಿ ಕ್ಲಬ್ ಇಂಟರ್‌ನ್ಯಾಷನಲ್‌ನ ರಾಮನಗರ ಶಾಖೆಯವತಿಯಿಂದ ಬಹುಮಾನಗಳನ್ನು ವಿತರಿಸಲಾಯಿತು.

## ಶ್ರೀ ದೊಡ್ಡಕೇರಮ್ಮನವರ ಬ್ರಹ್ಮ ರಥೋತ್ಸವ

ಕೆ ಆರ್ ಪೇಟೆ ಗ್ರಾಮ ದೇವತೆ ಶ್ರೀ ದೊಡ್ಡಕೇರಮ್ಮನವರ ಬ್ರಹ್ಮ ರಥೋತ್ಸವ ಇಂದು ಸಂಜೆ ಗೋಧೂಳಿ ಲಗ್ನದಲ್ಲಿ ಸಡಗರ ಸಂಭ್ರಮದಿಂದ ನಡೆಯಿತು.

ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ ಸಾವಿರಾರು ಬಂದಿ ಭಕ್ತಾದಿಗಳ ಸಮ್ಮುಖದಲ್ಲಿ ಕೆ ಆರ್ ಪೇಟೆ ಪುರ ಪ್ರಮುಖರು ದೇವರಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲ ನೀಡಿದರು.

ರಥೋತ್ಸವಕ್ಕೆ ಆಗಮಿಸಿದ್ದ ಭಕ್ತಾಧಿಗಳು ರಥಕ್ಕೆ ಹಣ್ಣು ಜವನ ಸಮರ್ಪಿಸಿ ರಥವನ್ನು ಎಳೆದರು.

ಶ್ರೀ ದೊಡ್ಡಕೇರಮ್ಮನವರಿಗೆ ಉಘೇ.. ಉಘೇ.. ಶ್ರೀ ವಳಗೆರೆಮ್ಮನವರಿಗೆ ಉಘೇ.. ಉಘೇ.. ಶ್ರೀ ಲಕ್ಷ್ಮೀದೇವಿ ಅಮ್ಮನವರಿಗೆ ಉಘೇ.. ಉಘೇ.. ಎಂದು ಘೋಷಣೆ ಕೂಗುತ್ತಾ ರಥವನ್ನು ಎಳೆಯುವ ಮೂಲಕ ತಮ್ಮ ಭಕ್ತಿ ಭಾವ ಸಮರ್ಪಿಸಿದರು.

ಪ್ರತಿ ವರ್ಷವೂ ಯುಗಾದಿಯ ನಂತರ ಅಗ್ರಹಾರ ಬಾಚಳ್ಳಿಯ ಶ್ರೀ ಲಕ್ಷ್ಮೀ ದೇವಮ್ಮನವರ ರಥೋತ್ಸವ ನಡೆದ ಒಂದು ವಾರದ ನಂತರ ಶ್ರೀ ದೊಡ್ಡಕೇರಮ್ಮನವರ ರಥೋತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆ. ಅದರಂತೆ ಕಳೆದ ವಾರ ಅಗ್ರಹಾರಬಾಚಳ್ಳಿ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಮ್ಮನವರ ರಥೋತ್ಸವವು ನಡೆದಿತ್ತು. ಈ ವಾಡಿಕೆಯಂತೆ ಕಳೆದ ಮಂಗಳವಾರದಿಂದ ದೊಡ್ಡಕೇರಮ್ಮನವರ ರಥೋತ್ಸವದ ಅಂಗವಾಗಿ ರಂಗಕುಣಿತ, ಬಾಯಿ ಬೀಗ, ಹಸಿರು ಬಂಡಿ ಉತ್ಸವ, ಸಿಡಿಮರ ತರುವ ಕಾರ್ಯಕ್ರಮ, ಶ್ರೀ ದೊಡ್ಡಕೇರಮ್ಮನವರ ಹೂವಿನ ತೇರು, ಶ್ರೀ ಚಿಕ್ಕಮ್ಮ ತಾಯಿ ಉತ್ಸವ ಸೇರಿದಂತೆ ಹಲವು ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆದಿದ್ದವು. ಇಂದು ದೊಡ್ಡಕೇರಮ್ಮನವರ ಬ್ರಹ್ಮ ರಥೋತ್ಸವವು ಶ್ರೀ ಭ್ರಮರಾಂಭ– ಶ್ರೀ ಮಲ್ಲಿಕಾರ್ಜುನ ಸ್ವಾಮಿ ಈಶ್ವರ ದೇವಾಲಯದಿಂದ ಆರಂಭವಾದ ರಥವು ಮುಕ್ಕಟ್ಟೆ ಚೌಕ, ಹಳೆ ಪೋಸ್ಟ್ ಆಫೀಸ್, ದುರ್ಗಾಭವನ್ ಸರ್ಕಲ್, ಶ್ರೀ ಗಣಪತಿ ದೇವಸ್ಥಾನದ ಬೀದಿಯಲ್ಲಿ ಸಾಗಿ ಸ್ವ– ಸ್ಥಾನದಲ್ಲಿ ಸಂಪನ್ನಗೊಂಡಿತು.

ರಥೋತ್ಸವದಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಸಮಾಜ ಸೇವಕ ಆರ್.ಟಿ.ಓ. ಮಲ್ಲಿಕಾರ್ಜುನ್, ಮೂಡಾ ಮಾಜಿ ಅಧ್ಯಕ್ಷ ಕೆ.ಶ್ರೀನಿವಾಸ್, ಕೆ.ಟಿ.ಗಂಗಾಧರ್, ಬಸ್ ಸಂತೋಷ್ ಕುಮಾರ್, ಗ್ರಾಮದ ಪಟೇಲ್ ಚಂದ್ರಶೇಖರ್, ಯಜಮಾನ್ ಹೆಗ್ಗಡಿ ಕೃಷ್ಣೇಗೌಡ, ಹಣ್ಣಿನ ಅಂಗಡಿ ರಾಮಣ್ಣ, ಯಜಮಾನ್ ಚೆಲುವಯ್ಯ, ವೆಂಕಟಯ್ಯ, ಗೋವಿಂದರಾಜು, ಲೋಕೇಶ್, ರಾಜಾಚಾರ್, ಥಿಯೇಟರ್ ಚಂದ್ರಣ್ಣ, ಸಿದ್ದೂರಣ್ಣ, ಕೆ. ಆರ್.ರವೀಂದ್ರಬಾಬು, ಕಾಳಯ್ಯ, ಕಡ್ಲೆಕಾಯಿ ಕೃಷ್ಣಣ್ಣ, ನಾಡಿಗರ ರಘುರಾಂ ನಾಡಿಗ್, ಬ್ಯಾಟರಿ ಷಾಪ್ ಕುಮಾರಣ್ಣ, ಆಟೋ ವಾಸು, ಸಚಿನ್ ಕೃಷ್ಣ, ಸೇರಿದಂತೆ ನೂರಾರು ಗಣ್ಯರು ಸಾವಿರಾರು ಮಂದಿ ಭಕ್ತಾದಿಗಳು ರಥೋತ್ಸವದಲ್ಲಿ ಭಾಗವಹಿಸಿದ್ದರು



## ಮೇ 24ರಂದು ಲಿಂಗಾಯತ ಚುನಾವಣೆ



ಮೈಸೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮೈಸೂರು ಪಾಲಿಕೆ ವ್ಯಾಪ್ತಿ, ಮೈಸೂರು ಗ್ರಾಮಾಂತರ, ಕೆ.ಆರ್. ನಗರ ಹಾಗೂ ಸಾಲಿಗ್ರಾಮ ತಾಲ್ಲೂಕು ಘಟಕಗಳ ನಿರ್ದೇಶಕರು, ಅಧ್ಯಕ್ಷರ ಸ್ಥಾನಗಳಿಗೆ ಮೇ 24 ರಂದು ಚುನವಣೆ ನಡೆಯಲಿದ್ದು, ಸ್ಪರ್ಧಿಸಲು ಆಸಕ್ತಿಯಿರುವವರು ನಾಮಪತ್ರ ಸಲ್ಲಿಸಬಹುದಾಗಿದೆ ಎಂದು ಉಪ ಚುನಾವಣಾಧಿಕಾರಿ ಬಿ.ಆರ್.ಉಮಾಕಾಂತ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಏ.29 ರಿಂದ ಮೇ 6 ರವರೆಗೆ ನಾಮಪತ್ರ ಸ್ವೀಕಾರ, ಮೇ 7 ರಂದು ಪರಿಶೀಲನೆ, ಮೇ 10 ರಂದು ವಾಪಸಿಗೆ ಅವಕಾಶ, ಮೇ 24 ರಂದು ಮತದಾನ, ಅಂದೇ ಸಂಜೆ ಮತ ಎಣಿಕೆ ನಡೆಯಲಿದೆ. ಠೇವಣಿ ಅಗತ್ಯವಿಲ್ಲ. ಆದರೆ ಅರ್ಜಿಗೆ 500 ರೂ., ಶುಲ್ಕ ಪಾವತಿಸಬೇಕು. ರಾಮಾನುಜ ರಸ್ತೆ ಬಸವೇಶ್ವರ ಪುತ್ಥಳಿ ಬಳಿಯ ಡಾ. ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿನ ಮಹಾಸಭಾ ಕಚೇರಿಯಲ್ಲಿ ಮತದಾನ ಹೊರತು ಪಡಿಸಿ, ಎಲ್ಲ ಪ್ರಕ್ರಿಯೆ ನಡೆಯಲಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ಈ ಕಚೇರಿ ಸಂಪರ್ಕಿಸಬಹುದಾಗಿದೆ ಎಂದರು. ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಮಾತನಾಡಿ, ಈಗಾಗಲೇ ಜಿಲ್ಲೆಯ ಇತರೆ ತಾಲ್ಲೂಕುಗಳಲ್ಲಿ ಆಯ್ಕೆ ನಡೆದಿದೆ. ಆದರೆ ಈ ತಾಲ್ಲೂಕುಗಳಿಗೆ ಮಾತ್ರ ನಡೆದಿರದ ಕಾರಣ ಈಗ ನಡೆಸಲಾಗುತ್ತಿದೆ ಎಂದರು. ನಾಗಸುಂದರ್, ಮಹದೇವಸ್ವಾಮಿ, ಪ್ರಕಾಶ್ ಹಾಜರಿದ್ದರು.

## ಆಲೂರು ಹೊಮ್ಮದಲ್ಲಿ ರಾಮೋತ್ಸವ



ಚಾಮರಾಜನಗರ, ತಾಲೂಕಿನ ಆಲೂರು ಹೊಮ್ಮ ಗ್ರಾಮದಲ್ಲಿ ನಾಯಕ ಸಮುದಾಯದ ವತಿಯಿಂದ ರಾಮೋತ್ಸವವನ್ನು ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ಶ್ರೀಪಟ್ಟಾಭಿರಾಮ ಮಂದಿರದಲ್ಲಿ ರಾಮೋತ್ಸವ ಅಂಗವಾಗಿ ಮಧ್ಯಾಹ್ನ ಹೋಮ, ಶ್ರೀರಾಮ ದೇವರಿಗೆ ವಿಶೇಷಪೂಜೆ ಸಲ್ಲಿಸಲಾಯಿತು.

ರಾತ್ರಿ ರಾಮ ದೇವರಿಗೆ ಪೂಜೆ ಸಲ್ಲಿಸಿ ಹೂವಿನ ಅಲಂಕೃತ ಪಲ್ಲಕ್ಕಿಯಲ್ಲಿ ಶ್ರೀರಾಮದೇವರ ಭಾವಚಿತ್ರವಿಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಭಕ್ತರು ಜೈ ಶ್ರೀರಾಮ್, ಜೈವಾಲ್ಮೀಕಿ ಘೋಷಣೆ ಕೂಗಿ ಸಂಭ್ರಮಿಸಿದರು.

▸▸ ಅಲಂಕೃತ ಪಲ್ಲಕ್ಕಿಯಲ್ಲಿ ಶ್ರೀರಾಮದೇವರ ಮೆರವಣಿಗೆ

ಮೆರವಣಿಗೆ ಹಾದು ಹೋಗುವ ರಸ್ತೆ ಮೇಲೆ ಬಣ್ಣಬಣ್ಣದ ಚಿತ್ತಾರ ಬಿಟ್ಟು ಸ್ವಾಗತಿಸಲಾಯಿತು. ಮೆರವಣಿಗೆಯಲ್ಲಿ ಗೂಳೀಪುರ ಗ್ರಾಮದ ನಾಯಕ ಜನಾಂಗದವರು,, ಹೊಮ್ಮ ನಾಯಕ ಜನಾಂಗದವರು, ಗ್ರಾಮಸ್ಥರು, ನಂಟರು ಭಾಗವಹಿಸಿದ್ದರು.

## ಶೃಂಗೇರಿ ಶಾರದಾ ಪೀಠದಲ್ಲಿ ಚಂಡಿಕಾ ಯಾಗ, ರಥ ಸಂಪ್ರೋಕ್ಷಣೆ

ಚಾಮರಾಜನಗರ, ತಾಲ್ಲೂಕಿನ ಹೆಬ್ಬಸೂರು ಗ್ರಾಮದಲ್ಲಿರುವ ಶೃಂಗೇರಿ ಶಾರದಾ ಪೀಠದಲ್ಲಿ ನಾಳೆ ನಡೆಯಲಿರುವ ರಥೋತ್ಸವದ ಅಂಗವಾಗಿ ಇಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ನೆರವೇರಿದವು.

ರಥೋತ್ಸವದ ಪೂರ್ವಭಾವಿಯಾಗಿ ಚಂಡಿಕಾ ಯಾಗವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ಜೊತೆಗೆ ರಥ ಸಂಪ್ರೋಕ್ಷಣೆ ಕಾರ್ಯಕ್ರಮವೂ ಶ್ರದ್ಧಾಭಕ್ತಿಯಿಂದ ನಡೆಯಿತು. ಈ ಸಂದರ್ಭದಲ್ಲಿ ಶಾರದಾ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಗ್ರಾಮಸ್ಥರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು. ನಾಳೆಯ ರಥೋತ್ಸವಕ್ಕೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದ್ದು, ಭಕ್ತರಲ್ಲಿ ಹರ್ಷೋದ್ಗಾರ ಮೂಡಿದೆ.



### ಇರಸವಾಡಿಯಲ್ಲಿ ಶ್ರೀಭಗೀರಥ ಮಹರ್ಷಿ ಅವರಿಗೆ ಅವಮಾನ

# ಪಿಡಿಓ ಅಮಾನತುಗೊಳಿಸಲು ಜಿ.ಪಂ.ಸಿಇಓಗೆ ಮನವಿ

ಚಾಮರಾಜನಗರ, ತಾಲೂಕಿನ ಇರಸವಾಡಿ ಗ್ರಾಮ ಪಂಚಾಯತಿಯಲ್ಲಿ ಶ್ರೀ ರಾಜಋಷಿ ಭಗೀರಥ ಮಹರ್ಷಿ ಅವರಿಗೆ ಅವಮಾನ ಮಾಡಿರುವ

ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಅಮಾನತ್ತು ಪಡಿಸಬೇಕು ಎಂದು ಒತ್ತಾಯಿಸಿ ಗ್ರಾಮದ ಉಪ್ಪಾರ ಬೀದಿಯ ಯಜಮಾನರು, ಸಮುದಾಯದವರು ಜಿ.ಪಂ.ಮಾಜಿ ಉಪಾಧ್ಯಕ್ಷ ಯೋಗೇಶ್, ತಾ.ಪಂ.ಮಾಜಿ ಸದಸ್ಯ ನಾಗರಾಜು ಅವರ ನೇತೃತ್ವದಲ್ಲಿ ನಗರದ ಜಿಲ್ಲಾಡಳಿತ ಭವನದಲ್ಲಿ ಜಿ.ಪಂ.ಉಪ ಕಾರ್ಯದರ್ಶಿ ಶೃತಿ ಅವರ ಮುಖಾಂತರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮೋನಾರೋತ್ ಅವರಿಗೆ ಮನವಿ ಸಲ್ಲಿಸಿದರು.

ಇರಸವಾಡಿ ಗ್ರಾಮದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಏ.23 ರಂದು ರಾಜಋಷಿ ಶ್ರೀ ಭಗೀರಥ ಮಹರ್ಷಿರವರ ಜನ್ಮ ದಿನಾಂಕದಂದು ನಮ್ಮ ಊರಿನ ಪಂಚಾಯಿತಿ ಸದಸ್ಯರುಗಳಿಗೆ ಮತ್ತು ಊರಿನ ಮುಖಂಡರುಗಳಿಗೆ ಭಗೀರಥ ಆಚರಣೆ ನಡೆಸಲು ಸುತ್ತೋಲೆ ಹೊರಡಿಸಿ,



ನಂತರ 11.30 ಗಂಟೆಯಾದರೂ ಪಂಚಾಯಿತಿಗೆ ಜವಾನರೊಬ್ಬರನ್ನು ಬಿಟ್ಟು ಯಾವ ಸಿಬ್ಬಂದಿಯೂ ಸಹ ಬಂದಿರಲಿಲ್ಲ. ನಂತರ ಪಂಚಾಯಿತಿ ಸದಸ್ಯರುಗಳು ಹಾಗೂ ಮುಖಂಡರುಗಳು 11.30 ರವರೆಗೂ ಪಂಚಾಯಿತಿ ಬಾಗಿಲಲ್ಲಿ ಕಾಯ್ದು ಕುಳಿತು ಮನೆಗೆ ಹೋದನಂತರ 12.00 ಗಂಟೆಗೆ ಬಂದಿದ್ದಾರೆ. ಆಗ ಊರಿನ ಮುಖಂಡರು ಹೋಗಿ ಮಾತನಾಡಿಸಿದಾಗ ಎಲ್ಲಾ ಜಾತಿಯವರು ಇದೊಂದು ಅವತಾರ ಎತ್ತಿಕೊಂಡು ಬರುತ್ತೀರಿ ನಾನು ಕಾಣದ ಭಗೀರಥನ .ಎಲ್ಲಾ ಜಾತಿಗೂ ಒಂದೊಂದು ಜಯಂತಿ ಮಾಡಿಕೊಂಡು ಬಂದರೆ ನಾವು ವರ್ಷ ಪೂರ್ತಿ ಎಲ್ಲಾ ಜಯಂತಿಗಳನ್ನು ಆಚರಿಸಿಕೊಂಡು ಕೂತಿರೋದೇ ಆಗಿರುತ್ತದೆ. ಆದುದರಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳವರು ಕಠಿಣ ತಪಸ್ಸಿನ ಮೂಲಕ ಧರೆಗೆ ನೀರನ್ನು ತಂದಕೊಟ್ಟ ಮಹಾಪುರುಷರ

ಶ್ರೀ ಭಗೀರಥ ಮಹರ್ಷಿಗೆ ಮಾಡಿದಂತ ಅವಮಾನವಾಗಿದೆ.ಆದುದರಿಂದ ಇವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು.

ಇಲ್ಲವಾದಲ್ಲಿ ಗ್ರಾಮ ಪಂಚಾಯಿತಿಗೆ ಗ್ರಾಮದ ಉಪ್ಪಾರ ಜನಾಂಗದವರು ಮುತ್ತಿಗೆ ಹಾಕಿ ನಿರಂತರ ಧರಣಿ ನಡೆಸಬೇಕಾಗುತ್ತದೆ ಎಂದು ಜಿ.ಪಂ.ಸಿಇಓ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಎಚ್ಚರಿಸಿದ್ದಾರೆ.

ಜಿ.ಪಂ.ಮಾಜಿ ಸದಸ್ಯ ಯೋಗೇಶ್, ತಾ.ಪಂ. ಮಾಜಿ ಸದಸ್ಯ ವೈ.ಕೆ.ನಾಗರಾಜು, ಇರಸವಾಡಿ ಗ್ರಾ.ಪಂ.ಮಾಜಿ ಅಧ್ಯಕ್ಷ ಮಾದೇಶ್, ಮಾಜಿ ಉಪಾಧ್ಯಕ್ಷ ಮಹದೇವಶೆಟ್ಟಿ, ಸದಸ್ಯ ರಂಗಸ್ವಾಮಿ, ಸುರೇಶ್, ಯಜಮಾನರಾದ ರಂಗಶೆಟ್ಟಿ, ಕೃಷ್ಣಶೆಟ್ಟಿ, ಶ್ರೀಭಗೀರಥ ಯುವಕರ ಸಂಘದ ಪದಾಧಿಕಾರಿಗಳು, ಮುಖಂಡರು ಭಾಗವಹಿಸಿದ್ದರು.

# ಮೇ6ರಂದು ಕಾಯಕಯೋಗಿ ಸಿದ್ದರಾಮೇಶ್ವರ ಜಯಂತಿ



ಮೈಸೂರು:– ಜಿಲ್ಲಾಡಳಿತದ ವತಿಯಿಂದ ಮೇ 6ರಂದು ರಾಜ್ಯ ಮಟ್ಟದ ಕಾಯಕ ಯೋಗಿ ಸಿದ್ದರಾಮೇಶ್ವರ ಜಯಂತಿಯನ್ನು ಆಯೋಜಿಸಲಾಗಿವುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಜ್ಯ ಮಟ್ಟದ ಕಾರ್ಯಕ್ರಮವಾಗಿರುವುದ ರಿಂದ ಮುಖ್ಯಮಂತ್ರಿಗಳು ಭಾಗವಹಿಸಲಿದ್ದು, ಅಧಿಕಾರಿಗಳು ಕಾರ್ಯಕ್ರಮ ಅಚ್ಚುಕಟ್ಟಾಗಿ ಯಾವುದೇ ಲೋಪವಾಗ ದಂತೆ ಆಯೋಜಿಸಬೇಕು ಎಂದರು.

ಮೆರವಣಿಗೆ ಕಾರ್ಯಕ್ರಮದ ಅಂಗವಾಗಿ ಮೇ 6 ರಂದು ಬೆಳಿಗ್ಗೆ ಕೋಟೆ ಅಂಜುನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕಲಾಮಂದಿರದವರೆಗೆ ಮೆರವಣಿಗೆ ನಡೆಯಲಿದೆ. ವೀರಗಾಸೆ, ಡೊಳ್ಳು ಕುಣಿತ ವಿವಿಧ ಕಲಾತಂಡಗಳು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರಗು ನೀಡಲಿದೆ. ವೇದಿಕೆ ಕಾರ್ಯಕ್ರಮ ಕಲಾಮಂದಿರ ದಲ್ಲಿ ವೇದಿಕೆ ಕಾರ್ಯಕ್ರಮ ಮೇ 6 ರಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ. ಶಿಷ್ಟಾಚಾರದ ಅನುಸಾರ ಎಲ್ಲಾ ಜನಪ್ರತಿನಿಧಿಗಳನ್ನು ಆಹ್ವಾನಿಸಬೇಕು ಎಂದರು.

ಮಾಲಾರ್ಪಣೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಅವರು ಮಾತನಾಡಿ ಮೆರವಣಿಗೆಯಲ್ಲಿ ಭಾಗವಹಿಸುವ ಕಲಾತಂಡ ಹಾಗೂ ಕಲಾವಿದರಿಗೆ ಉಪಹಾರ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಮೆರವಣಿಗೆ ಸಾಗುವ ಸಂದರ್ಭ ದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಚಿತ್ರದುರ್ಗದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿ ಅವರು ಕಾರ್ಯಕ್ರಮದ ದಿವ್ಯ ಸಾನಿದ್ಯ ವಹಿ ಸಲಿದ್ದಾರೆ ಹಾಗೂ ಕಾರ್ಯಕ್ರಮ ಪ್ರಾರಂ ಭವಾಗುವ ಮೊದಲು ವೇದಿಕೆಯಲ್ಲಿ ವಚನ ಗಾಯನ ಕಾರ್ಯಕ್ರಮ ಆಯೋಜಿಸುವಂತೆ ತಿಳಿಸಿದರು. ಭೋವಿ ಸಮುದಾಯದ ಮುಖಂಡರುಗಳ ನ್ನೊಳಗೊಂಡಂತೆ ವಿವಿಧ ಸಮಿತಿಗಳನ್ನು ರಚಿಸಿಕೊಂಡು ರಾಜ್ಯದ ಎಲ್ಲಾ ಭಾಗಗಳಲ್ಲಿ ಪ್ರಚಾರ ನೀಡಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆ ಯಲ್ಲಿ ಕಾರ್ಯಕ್ರಮ ದಲ್ಲಿ ಭಾಗವಹಿಸುವಂತೆ ಸಂಘಟಿಸುವಂತೆ ತಿಳಿಸಿದರು. ಕರ್ನಾಟಕ ಭೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ. ಸೀತಾರಾಮು ಮಾತನಾಡಿ ಮೆರವಣಿಗೆ ಯಲ್ಲಿ ಕಳಸ ಹೊತ್ತ ಮಹಿಳೆಯರು ಭಾಗವಹಿಸಿದರೆ ಕಾರ್ಯಕ್ರಮ ಉತ್ತಮವಾಗಿ ಮೂಡಿ ಬರಲಿದೆ. ಇದಕ್ಕೆ ವ್ಯವಸ್ಥೆ ಮಾಡಿಕೊಡುವಂತೆ ಮನವಿ ಮಾಡಿದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ: ಸುದರ್ಶನ್, ಭೋವಿ ಸಮುದಾಯದ ಮುಖಂಡರುಗ ಳಾದ ವಿಜಯ ಕುಮಾರ್, ಟಿ. ಕೃಷ್ಣ, ದೇವರಾಜು, ಜಿ ನಾಗರಾಜು, ಪಿ. ಎಲ್ ಚಿನ್ನಸ್ವಾಮಿ, ಬಿ.ವಿ ಶ್ರೀನಿವಾಸ್, ಮೋಹನ್ ಜಿ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

# ಸಂವಿಧಾನದಿಂದ ಸಾಮಾಜಿಕ ನ್ಯಾಯ



ಮೈಸೂರು: ಸಂವಿಧಾನದ ಮೂಲಕ ಸಾಮಾಜಿಕ ನ್ಯಾಯವನ್ನು ದೊರಕಿಸಲು ಅಂಬೇಡ್ಕರ್ ಹಗಲಿರುಳು ಶ್ರಮಿಸಿದರು. ಸಂವಿಧಾನವಿಲ್ಲದಿದ್ದರೆ ಸಾಮಾಜಿಕ ನ್ಯಾಯ ಸಿಗುತ್ತಿರಲಿಲ್ಲ ಎಂದು ಕಾನೂನು ತಜ್ಞ ಕೆ. ಎಲ್.ಚಂದ್ರಶೇಖರ ಐಜೂರ್ ತಿಳಿಸಿದರು.

ವಿಶ್ವೇಶ್ವರನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿ ನಿಲಯದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಅವರ 135ನೇ ಜಯಂತಿಯ ಭೀಮೋತ್ಸವ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ಅಂಬೇಡ್ಕರ್ ಅವರನ್ನು ಸ್ಫೂರ್ತಿಯಾಗಿ ಸ್ವೀಕರಿಸಬೇಕು. ಅಂಬೇಡ್ಕರ್ ಅವರು ಪಟ್ಟಕಷ್ಟಗಳು ನಮಗ್ಯಾರಿಗೂ ಇಲ್ಲ. ಇರುವ ಸೌಲಭ್ಯಗಳನ್ನು ಬಳಸಿಕೊಂಡು ಉತ್ತಮ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಲೇಖಕಿ ಪ್ರೊ.ಕವಿತಾ ರೈ ಮಾತನಾಡಿ, ಅಸ್ಪಶ್ಯತೆ ಆಚರಣೆ ನಿಂತಿರಬಹುದು. ಆದರೆ, ಸ್ಪಶ್ಯ ಮತ್ತು ಅಸ್ಪಶ್ಯ ಎಂಬ ಪರಿಕಲ್ಪನೆಗಳು ಜನರ ಮನದಲ್ಲಿ ಗಟ್ಟಿಯಾಗಿ ನೆಲೆ ನಿಂತಿವೆ ಎಂದರು. ಎಐಯುಟಿಯುಸಿ ಜಿಲ್ಲಾ ಮುಖಂಡರಾದ ಪಿ.ಎಸ್. ಸಂಧ್ಯಾ ಮಾತನಾಡಿ, ಜನಪರ ಕಾಳಜಿ ಮತ್ತು ಆಡಳಿತದ ನಡುವೆ ಇರಬೇಕಾದ ಕೊಂಡಿ ಇಂದು ಕಳಚಿದೆ. ಅದನ್ನು ಮತ್ತೆ ಮರುಸ್ಥಾಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಪದವಿ, ಸ್ನಾತಕೋತ್ತರ ಪದವಿ ನಂತರ ಏನು? ವಿಷಯ ಕುರಿತು ಮಾತನಾಡಿ, ಪ್ರತಿ ವಿದ್ಯಾರ್ಥಿಯೂ ಕಡ್ಡಾಯವಾಗಿ ಡಬಲ್ ಡಿಗ್ರಿ ಪಡೆಯಬೇಕು. ಸರ್ಕಾರದಿಂದ ಸಿಗುವ ಎಲ್ಲ ಸೌಲಭ್ಯಗಳ ಸದ್ಬಳಕೆ ಮಾಡಿಕೊಂಡು ಬದುಕು ಕಟ್ಟಿಕೊಳ್ಳಬೇಕು ಎಂದು ತಿಳಿಸಿದರು.

**ಮಹಿಳಾ ಮೀಸಲಾತಿ ವಿರೋಧಿ ಕಾಂಗ್ರೆಸ್**

## ಮಿತ್ರಪಕ್ಷಗಳ ಸಂಸದರಿಂದ ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ

**ಮಹಿಳಾ ವಿರೋಧಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ : ಮಲೆಯೂರು ಕಮಲಮ್ಮ ಕರೆ**

ಚಾಮರಾಜನಗರ, ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ಮಹಿಳಾ ವಿರೋಧಿ ನೀತಿಯನ್ನು ಖಂಡಿಸಿ ನಗರದಲ್ಲಿ ಬಿಜೆಪಿ ಮಹಿಳಾ ಮೋರ್ಚಾದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯೂರು ಕಮಲಮ್ಮ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕರರು ಹಾಗೂ ಬಿಜೆಪಿ ಮುಖಂಡರು ಅಲ್ಲಿಂದ ತ್ಯಾಗರಾಜ್ ರಸ್ತೆ ಮಾರ್ಗವಾಗಿ ಶ್ರೀ ಭುವನೇಶ್ವರಿ ವೃತ್ತ ತಲುಪಿ, ಕೆಲ ಕಾಲ ರಸ್ತೆ ತಡೆ ನಡೆಸಿ, ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಎಬಿಯುಪಿ ರಾಜ್ಯ ಉಪಾಧ್ಯಕ್ಷೆ ನಿರ್ಮಲ ಮಾತನಾಡಿ, ದೇಶದ ಜನಸಂಖ್ಯೆಯಲ್ಲಿ ಅರ್ಧ ಭಾಗ ಮಹಿಳೆಯರು ಇದ್ದೇವೆ. ನಮಗೆ ಪುರು ಷರಷ್ಟೇ ಸಮಪಾಲು ಲಭಿಸಬೇಕು. ಕಳೆದ 1971ರಿಂದಲೂ ಮಹಿಳೆ ಯರಿಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮೀಸಲಾತಿ ನೀಡುವ ಕಾಯ್ದೆಗೆ ಕಾಂಗ್ರೆಸ್ ಹಾಗೂ ಇತರೇ ಪಕ್ಷಗಳು ವಿರೋಧ ಮಾಡುತ್ತಾಲೇ ಬಂದಿವೆ. 2023ರಲ್ಲಿಯೇ ಮಹಿಳೆಯರಿಗೆ ಮೀಸಲಾತಿ ನೀಡುವ ಬಿಲ್ ಪಾಸ್ ಅಗಿದ್ದು, ಇದನ್ನು ಜಾರಿ ಮಾಡಲು ಕಾಂಗ್ರೆಸ್ ಸಂಸದರು ಬಿಡುತ್ತಿಲ್ಲ. ಮಹಿಳಾ ವಿರೋಧಿ ಧೋರಣೆಯನ್ನು ಅನುಸರಿಸುತ್ತಿರುವ ಯಾವುದೇ ಪಕ್ಷದ ಸಂಸದರು ಹಾಗು ಪಕ್ಷವನ್ನು ಮಹಿಳೆಯರು ಮುಂದಿನ ಚುನಾವಣೆಗಳಲ್ಲಿ ತಿರಸ್ಕಾರ ಮಾಡುವ ಮೂಲಕ ಒಗ್ಗಟ್ಟು ಪ್ರದರ್ಶನ ಮಾಡಬೇಕು ಎಂದು ಕರೆ ನೀಡಿದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಲೆಯೂರು ಕಮ ಲಮ್ಮ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಮಹಿಳೆಯರ ಬಗ್ಗೆ ಕಾಳಜಿ ಇಲ್ಲ. ಲೋಕಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಕಾಯ್ದೆಗೆ ಬೆಂಬಲ ನೀಡದೆ ಸೋಲುವಂತೆ ಮಾಡಿದ್ದಾರೆ. ಇಂಥ ಮಹಿಳಾ ವಿರೋಧಿ ರಾಹುಲ್‌ಗಾಂಧಿ, ಹಾಗೂ ಆ ಪಕ್ಷಗಳ ಸಂಸದರಿಗೆ ಮುಂಬ ರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು. ಈಗ ನಡೆದಿರುವ ಪಂಚ ರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗು ಮೈತ್ರಿ ಪಕ್ಷಗಳು ಸೋಲುತ್ತವೆ. ಮಹಿಳಾ ಮೀಸಲಾತಿ ಜಾರಿಯಾಗುವವರೆಗೆ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದು ಎಚ್ಚರಿಕೆ ನೀಡಿದರು. ಪ್ರತಿ ಭಟನೆಯಲ್ಲಿ ಮಹಿಳಾ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ. ಶೈಲಾ, ಮಹಿಳಾ ಮೋರ್ಚಾದ ಜಿಲ್ಲಾ ಪ್ರಭಾರಿ ರೂಪೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇವಸ್ವಾಮಿ, ಜಿಲ್ಲಾ ಉಪಾ ಧ್ಯಕ್ಷ ರೇವಣ್ಣ, ಸಂತೇಮಹಳ್ಳಿ ರವೀಶ್, ಗ್ರಾಮಾಂತರ ಮಂಡಲದ ಅಧ್ಯಕ್ಷ ಕಾಡಹಳ್ಳಿ ಕುಮಾರ್, ನಗರ ಘಟಕದ ಅಧ್ಯಕ್ಷ ಶಿವರಾಜ್, ಜಿಲ್ಲಾ ಉಪಾಧ್ಯಕ್ಷರಾದ ಕುಮಚಹಳ್ಳಿ ಪಾರ್ವತಮ್ಮ, ರಾಜೇಶ್ವರಿ, ಸರೋಜ, ಎಲ್. ಕವಿತಾ, ಮೊದಲಾದವರು ಹಾಜರಿದ್ದರು.

# ಕೈ ವಿರುದ್ಧ ಸ್ತ್ರೀಯರ ಪ್ರತಿಭಟನೆ

## ಮಹಿಳಾ ಮೀಸಲಾತಿ ಮಸೂದೆ ವಿಫಲಕ್ಕೆ ಆಕ್ರೋಶ



**ಮಾಸಿಕ 2 ಸಾವಿರ ಕೊಟ್ಟು ಮಹಿಳೆಯರು ಮನೆಯಲ್ಲೇ ಕೂರಬೇಕು ಎಂಬುದು ಕಾಂಗ್ರೆಸ್ ಉದ್ದೇಶ**

ರಾಮನಗರ: ಮಹಿಳೆಯರಿಗೆ ಮಾಸಿಕ 2 ಸಾವಿರ ಹಣ ಕೊಟ್ಟು ಅವರನ್ನು ಮನೆಯಲ್ಲಿಯೇ ಕೂರಿಸ ಬೇಕೆಂದು ಕಾಂಗ್ರೆಸ್ ನೇತೃತ್ವದ ಸಿದ್ದರಾಮಯ್ಯ ಸರ್ಕಾರ ಅಂದುಕೊಂಡಿದೆ. ಇನ್ನೊಂದೆಡೆ ಕೇಂದ್ರ ದಲ್ಲಿರುವ ಮೋದಿ ಸರ್ಕಾರ ಮಹಿಳೆಯರಿಗೆ ರಾಜ ಕೀಯದಲ್ಲಿ ಶೇ 33 ಮೀಸಲಾತಿ ಕೊಡಬೇಕು ಎಂದು ಮಸೂದೆ ಮಂಡಿಸಿದೆ. ಆದರೆ ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟ ಮಸೂದೆಯನ್ನು ಸೋಲಿ ಸಿದೆ ಎಂದು ಮಹಿಳಾ ಜಾಗೃತಿ ವೇದಿಕೆಯ ಪದಾ ಧಿಕಾರಿಗಳು ಮತ್ತು ಕಾರ್ಯಕರ್ತರು ಹರಿಹಾಯ್ದರು.

ನಗರದ ಕೆಂಗಲ್ ಹನುಮಂತಯ್ಯ ಮಂಟಪ ದಲ್ಲಿ ಹನುಮಂತಯ್ಯನವರ ಪುತ್ಥಳಿಗೆ ಮಾಲಾ ರ್ಪಣೆ ಮಾಡಿ ನಂತರ ಐಜೂರು ವೃತ್ತಕ್ಕೆ ಕಾಲ್ನ ಡಿಗೆ ಮೂಲಕ ಆಗಮಿಸಿದ ಪ್ರತಿಭಟನಾಕಾರರು, ಮಹಿಳಾ ಮೀಸಲಾತಿ ಮಸೂದೆ ಸೋಲಿಸಿದ ಕಾಂಗ್ರೆಸ್ ನೇತೃತ್ವತ ಇಂಡಿಯಾ ಕೂಟದ ವಿರುದ್ಧ ಮಹಿಳಾ ಜಾಗೃತಿ ವೇದಿಕೆಯ ಪ್ರತಿಭಟನೆ ನಡೆಸಿ ದರು. ಮೀಸಲಾತಿ ನಮ್ಮ ಹಕ್ಕು, ನಮಗೆ ನ್ಯಾಯ ಬೇಕು ಎಂದು ಘೋಷಣೆಗಳನ್ನು ಕೂಗಿದರು.

ಈ ವೇಳೆ ಮಹಿಳಾ ಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷೆ ವೇದಾ ವೆಂಕಟೇಶ್ ಮಾತನಾಡಿ, ಸ್ತ್ರೀಯರಿಗೆ ಎಲ್ಲಿ ಗೌರವ ಇರುತ್ತದೆಯೋ ಅಲ್ಲಿ ಪ್ರತಿಯೊಂದು ಮನೆಯೂ ಬೆಳಗುತ್ತದೆ ಎಂದು ಆದಿಪುರಾಣ ಕಾಲದಿಂದ ಹೆಣ್ಣುಮಕ್ಕಳನ್ನು ಗೌರವಿಸುತ್ತಾ ಬಂದಿರುವುದನ್ನು ಕಂಡಿದ್ದೇವೆ. ಸಮಾಜದಲ್ಲಿ ಪುರುಷರಂತೆ ಮಹಿಳೆಗೂ ಸಮಾನ ಸೂಕ್ತ ಸ್ಥಾನಮಾನ ನೀಡಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳೆಯರಿಗೆ ಶೇ.33ರಷ್ಟು ಮೀಸಲು ಕಲ್ಪಿಸುವ ಸಂಬಂಧ ಮಂಡಿಸಿದ ವಿದೇಯಕಕ್ಕೆ ಕಾಂಗ್ರೆಸ್ ಏಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂಬುದು ಗೊತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಮಗೆ ಆಗಿರುವ ಅನ್ಯಾಯವನ್ನು ಖಂಡಿಸುವ ಜೊತೆಗೆ ನ್ಯಾಯ ಸಿಗುವವರೆಗೆ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೂಪಾ, ಪವಿತ್ರ, ಮಮತಾ, ಹೇಮಾವತಿ, ತಾಸೀನಾ, ಮಂಜುಳಾ, ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಮುಖಂಡರಾದ ಚನ್ನಪ್ಪ, ರುದ್ರದೇವರು, ನಾಗೇಶ್, ಚಂದ್ರಶೇಖರ್, ಕಾಳಯ್ಯ, ಚಂದು ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

### ನಮ್ಮ ಹಕ್ಕು ಕಸಿದು ಕೊಂಡಂತಾಗಿದೆ: ರಮ್ಯಾ

**ಮಹಿಳಾ ಮುಖಂಡರಾದ ರಮ್ಯಾ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಿಳೆಯರಿಗೆ ಸ್ಥಾನಮಾನ ಕಲ್ಪಿಸುವ ಬಗ್ಗೆ ಅವಕಾಶ ಕಲ್ಪಿಸಿದೆ ಆದರೆ. ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಕೊಡಲು ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳು ಮೀನಾಮೇಷ ಎಣಿಸುತ್ತಿರುವುದು ಸರಿಯಲ್ಲ. ಇದರಿಂದ ನಮ್ಮ ಹಕ್ಕನ್ನು ಕಸಿದುಕೊಳ್ಳುತ್ತಿದ್ದು ನಮಗೆ ಆಗುತ್ತಿರುವ ಅನ್ಯಾಯವನ್ನು ನಾವೇ ಖಂಡಿಸುವ ಅನಿವಾ ರ್ಯತೆ ಎದುರಾಗಿದೆ. ಮಹಿಳಾ ಮೀಸಲಾತಿ ಪಡೆದುಕೊಳ್ಳಲು ಎಲ್ಲೆಡೆ ಸಂಘಟನೆ ಮಾಡಿ ಹೋರಾಟ ರೂಪಿಸುತ್ತೇವೆ ಎಂದರು.**

## ಟೌನ್ ಪಿಎಸಿಸಿ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ

**ಅಧ್ಯಕ್ಷರಾಗಿ ರಮೇಶ್ ಉಪಾಧ್ಯಕ್ಷ ರಾಗಿ ಹೊನ್ನಪ್ಪ ಅವಿರೋಧ ಆಯ್ಕೆ**


ಗುಂಡ್ಲುಪೇಟೆ: ಪಟ್ಟಣದ ಟೌನ್ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ರಮೇಶ್ ರವರು ಉಪಾಧ್ಯಕ್ಷರಾಗಿ ಮಡಹಳ್ಳಿ ಗ್ರಾಮದ ಹೊನ್ನಪ್ಪ ಅವರು ಅವಿರೋಧವಾಗಿ ಆಯ್ಕೆಯಾದರು.

ಏ.16 ರಂದು ನಿರ್ದೇಶಕರುಗಳ ಚುನಾವಣೆ ನಡೆಯಿತು ಕಾಂಗ್ರೆಸ್ ನ ಒಟ್ಟು 12 ಮಂದಿ ಸದಸ್ಯರ ಪೈಕಿ ನಾಲ್ಕು ಮಂದಿ ಅವಿರೋಧವಾಗಿ ಆಯ್ಕೆಯಾ ಗಿದ್ದರೆ ಎಂಟು ಮಂದಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ನ ಎಲ್ಲಾ ನಿರ್ದೇಶಕರಾಗುವ ಗೆಲ್ಲುವ ಮೂಲಕ ಟೌನ್ ಪಿಎಸಿಸಿ ಕ್ಲೀನ್ ಸ್ವೀಪ್ ಮಾಡಿದರು.

ಪುರಸಭೆಯಲ್ಲಿ ಮೂರು ಬಾರಿ ಸದಸ್ಯರಾಗಿ ಒಮ್ಮೆ ಅಧ್ಯಕ್ಷರಾಗಿದ್ದ ಪಟ್ಟಣದ ರಮೇಶ್ ರವರನ್ನು ಪಕ್ಷದ ಮುಖಂಡರ ಸೂಚನೆಯಂತೆ ಅಧ್ಯಕ್ಷರಾಗಿ ಆಯ್ಕೆ ಮಾಡಿದರೆ, ಗಣೇಶ್ ಪ್ರಸಾದ್ ರವರ ಕಟ್ಟಾ ಬೆಂಬಲಿಗ ಸಾಮಾಜಿಕಜಾಲತಾಣದಲ್ಲಿ ಬಿಜೆಪಿ ವಿರುದ್ಧ ಮುಗಿ ಬೀಳುವ ಯುವ ಮುಖಂಡ ಮಡಹಳ್ಳಿ ಗ್ರಾಮದ ಹೊನ್ನಪ್ಪ@ ಜೀವನ್ ಅವರನ್ನು ಉಪಾ ಧ್ಯಕ್ಷ ರನ್ನಾಗಿ ಮಾಡಲಾಯಿತು.

**ನೂತನ ಅಧ್ಯಕ್ಷರು ಉಪಾಧ್ಯಕ್ಷರಿಗೆ ಶಾಸಕರ ಅಭಿನಂದನೆ:**

ಟೌನ್ ಪಿಎಸಿಸಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷ ರಿಗೆ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ , ಚಾಮುಲ್ ನಿರ್ದೇಶಕ ಎಚ್ ಎಸ್ ನಂಜುಂಡಪ್ರಸಾದ್, ಮಾಜಿ ಕಾಡಾ ಅಧ್ಯಕ್ಷ ಹೆಚ್ ಎಸ್ ನಂಜಪ್ಪ, ಜಿ.ಪಂ ಮಾಜಿ ಉಪಾಧ್ಯಕ್ಷ ಕೆ ಎಸ್ ಮಹೇಶ್ ಅಭಿನಂದಿಸಿದರು.



# ಆಂಬುಲೆನ್ಸ್ ಕೊಡುಗೆ ನೀಡಿದ ಮುಸ್ಲಿಂ ಮುಖಂಡ



ಕೆ ಆರ್ ಪೇಟೆ: ಕ್ಷೇತ್ರದ ಶಾಸಕ ಹೆಚ್ ಟಿ ಮಂಜು ಹೆಸರಿನಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗೆ ಉಚಿತವಾಗಿ ಆಂಬುಲೆನ್ಸ್ ಕೊಡುಗೆಂ ದಾಗಿ ನೀಡಿದ ಮುಸ್ಲಿಂ ಸಮುದಾಯದ ಯುವ ಮುಖಂಡ ಸಾದಿಕ್

ತಾಲ್ಲೂಕಿನ ಶೀಳನೆರೆ ಹೋಬಳಿ ಸಿಂಧ ಗಟ್ಟ ಗ್ರಾಮದ ಜೆಡಿಎಸ್ ಯುವ ಮುಖಂಡ ಹಾಗೂ ಕೆ ಇ ಬಿ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಸಾದಿಕ್ ಅವರು ತಾಲ್ಲೂಕಿನ ಬಡವರ ಸಹಾ ಯಕ್ಕಾಗಿ ಕ್ಷೇತ್ರದ ಜನಪ್ರಿಯ ಶಾಸಕ ಹೆಚ್ ಟಿ ಮಂಜು ಅವರ ಹೆಸರಿನಲ್ಲಿ ಆಂಬುಲೆನ್ಸ್ ವಾಹನವನ್ನು ಸಾರ್ವಜನಿಕ ಸೇವೆಗೆ ಕೊಡು ಗೆಯಾಗಿ ನೀಡಿದ್ದಾರೆ. ಕ್ಷೇತ್ರದ ಶಾಸಕ ಹೆಚ್ ಟಿ ಮಂಜು ಮಾತನಾಡಿ ನಮ್ಮ ನೆಚ್ಚಿನ ಗ್ರಾಮಗಳಲ್ಲಿ ಒಂದಾದ ಸಿಂಧಘಟ್ಟ ಗ್ರಾಮದ ನಮ್ಮ ಪಕ್ಷದ ಯುವಕನಾದ ಸಾದಿಕ್ ಹಾಗೂ ರೋಷನ್ ಯುವಕರ ಬಗ್ಗೆ ಹೆಮ್ಮೆ ಎನಿಸು ತ್ತದೆ. ಸಮಾಜ ಸೇವೆಯನ್ನು ಮಾಡುವ ಹಂಬಲವಿದೆ.ಪ್ರತಿಯೊಬ್ಬ ಯುವಕರಲ್ಲಿ ಇದೇ ತರಹದ ಸಾಮಾಜಿಕ ಕಳಕಳಿ ಕಾಳಜಿ ಮನಸ್ಸು ಮೂಡಬೇಕು.ಸಣ್ಣಪುಟ್ಟ ವ್ಯವಹಾರಗ ಳನ್ನು ನಡೆಸಿಕೊಂಡು ಬರುತ್ತಿರುವ ಸಾದಿಕ್ ಅವರು ನನ್ನ ಹೆಸರಿನಲ್ಲಿ ಆಂಬುಲೆನ್ಸ್ ವಾಹ ನವನ್ನು ಸಾರ್ವಜನಿಕ ಸೇವೆಗೆ ಬಿಟ್ಟಿರುವ ಅವರ ಕಾರ್ಯ ಶ್ಲಾಘನೀಯ ಎಂದರಲ್ಲದೇ ಅವರ ಜೊತೆಗೆ ನಾನ ಸಹ ಕೈಜೋಡಿಸಿ ಅವರ ಸೇವೆಗೆ ನನ್ನ ಸಹಮತ ಇರುತ್ತದೆ. ಯಾವುದೇ ಫಲಾಪೇಕ್ಷೆ ಇಲ್ಲದೆ ಇಂತಹ ಕಾರ್ಯ ಮಾಡುತ್ತಿರುವ ಅವರಿಗೆ ಭಗವಂ ತನ ಆಶೀರ್ವಾದ ಇರಲಿ ಎಂದರು. ಬಳಿಕ ಮಾತನಾಡಿದ ಸಾದಿಕ್ ನಮ್ಮ ನಾಯಕರು, ಬಡವರ ಪಾಲಿನ ನಂದಾದೀಪ ಶಾಸಕರಾದ ಹೆಚ್ ಟಿ ಮಂಜು ಅವರ ಜನಪರ ಕಾಳಜಿಯನ್ನು ಹೊಂದಿರುವ ವ್ಯಕ್ತಿತ್ವ ವುಳ್ಳ ಜನನಾಯಕ ಹೆಚ್ ಟಿ ಮಂಜಣ್ಣ ಅವರ ಹೆಸರಿನಲ್ಲಿ ಸನಾಜ ಸೇವೆಯನ್ನು ಒದಗಿ ಸುವ ಮಹಾದಾಸೆಯ ದೃಷ್ಟಿ ಯಿಂದ ನನ್ನ ವೈಯುಕ್ತಿಕವಾಗಿ ಆಂಬುಲೆನ್ಸ್ ವಾಹನವನ್ನು ನೀಡಿದ್ದೇನೆ.ಪಕ್ಷಾ ತೀತವಾಗಿ,ಧರ್ಮಾತೀತವಾಗಿ, ಕರ್ನಾಟಕದ ಯಾವುದೇ ಮೂಲೆಗೂ ಹೋಗಲು ಸಿದ್ದ ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳು ವಂತೆ ಮನವಿ ಮಾಡಿಕೊಂಡರು. ಸಾದಿಕ್ ಹಾಗೂ ರೋಷನ್ ಅವರು ಶಾಸಕರಿಗೆ ಸನ್ಮಾನಿಸಿದರು. ಶಾಸಕರಾದ ಹೆಚ್ ಟಿ ಮಂಜಣ್ಣ ಅಭಿನಂದನೆ ಸಲ್ಲಿಸಿದರು.

# ಸಂಪನ್ನಗೊಂಡ ವರದರಾಜಸ್ವಾಮಿ ಬ್ರಹ್ಮರಥೋತ್ಸವ

ಎಚ್.ಡಿ.ಕೋಟೆ: ಪಟ್ಟಣದ ಪುರಾತನ ಪ್ರಸಿದ್ಧ ಶ್ರೀ ಲಕ್ಷ್ಮೀವರದರಾಜ ಸ್ವಾಮಿಯ 14ನೇ ವರ್ಷದ ಬ್ರಹ್ಮರಥೋತ್ಸವವು ಅತ್ಯಂತ ಸಡಗರ ಸಂಭ್ರಮದಿಂದ ಸಂಪನ್ನಗೊಂಡಿತು.

ರಥೋತ್ಸವವು ಪಟ್ಟಣದ ಪ್ರಮುಖ ರಥ ಬೀದಿಗಳಲ್ಲಿ ಸಂಚರಿಸಿತು. ಶೃಂಗರಿಸಲಾಗಿದ್ದ ರಥದ ಮಂಟಪದ ಮೇಲೆ ಶ್ರೀ ಲಕ್ಷ್ಮೀ ವರದರಾಜಸ್ವಾಮಿ, ಶ್ರೀದೇವಿ, ಭೂದೇವಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು. ಸೋಮವಾರ ಬೆಳಿಗ್ಗೆ 10 ಗಂಟೆಗೆ ರಥೋತ್ಸವಕ್ಕೆ ಚಾಲನೆ ನೀಡ ಲಾಯಿತು. ಸ್ವಾಮಿಯವರನ್ನಿ ರಿಸಿದ ರಥ ವನ್ನು ಭಕ್ತರು ಎಳೆದು ಭಕ್ತಿ ಸಮರ್ಪಿಸಿದರು. ಪಟ್ಟಣದ ಮೊದಲ ಮುಖ್ಯ ರಸ್ತೆಯಿಂದ ಸಾಗಿದ ರಥವು, 2ನೇ ಮುಖ್ಯ ರಸ್ತೆ ಮೂಲಕ ಮಧ್ಯಾಹ್ನ 1ಗಂಟೆಗೆ ದೇವಸ್ಥಾನಕ್ಕೆ ಬಂದು ಸೇರಿತು. ನಂತರ ಭಕ್ತರಿಗೆ ಪ್ರಸಾದ ವಿತರಿಸಿದರು.



ಪಟ್ಟಣದ ಪ್ರಮುಖ ಬೀದಿಗಳು ವಾರದಿಂದ ದೀಪಾಲಂಕಾರಗಳಿಂದ ಝಗ ಮಗಿಸಿದವು. ಒಂದು ವಾರದಿಂದ ಹಬ್ಬದ ಕಳೆ ನಿರ್ಮಾಣವಾಗಿತ್ತು. ಯುವಕರು ಲಗಾರಿ ಮತ್ತು ಮಂಗಳವಾದ್ಯಕ್ಕೆ ಹೆಜ್ಜೆ ಹಾಕಿದರು. ಮೇಲುಕೋಟೆ, ಮಂಡ್ಯ, ಬೆಂಗಳೂರು ಸೇರಿದಂತೆ ವಿವಿಧ ಭಾಗಗಳಿಂದ ಅನೇಕ ಭಕ್ತಾದಿಗಳು ಆಗಮಿಸಿರುವುದು ಸಂಭ್ರಮವನ್ನು ಇಮ್ಮಡಿಗೊಳಿಸಿತು. ರಥೋತ್ಸವದ ಅಂಗವಾಗಿ ಪಟ್ಟಣದ ಎಲ್ಲಾ ಮನೆಗಳ ಮುಂಭಾಗದಲ್ಲಿ ರಂಗೋಲಿ, ತಳಿರು ತೋರಣಗಳಿಂದ ಸಿಂಗಾರ ಮಾಡಿದ್ದರು. ಭಕ್ತಾದಿಗಳು ಹಣ್ಣು ಕಾಯಿಗಳನ್ನು ಪೂಜೆಗೆ ನೀಡಿದರು. ವಿವಿಧೆಡೆಯಿಂದ ಆಗಮಿಸುತ್ತಿರುವ ಭಕ್ತರು ಭಕ್ತಿಭಾವ ಮೆರೆದರು. ದೇವಸ್ಥಾನ ಸಮಿತಿಯ ಅಧ್ಯಕ್ಷ ಬಿ.ಎಸ್. ರಂಗಯ್ಯಂಗಾರ್, ರಾಜನಾಯಕ, ತಿರುಮಲಾಚಾರ್, ವಿನಯ್ ವಾಡ್ಕರ್, ಡಿಶ್ ದೇವರಾಜು, ಡೇರಿ ಶ್ರೀಕಾಂತ್, ಶ್ರೀಧರ್, ಶ್ರೀನಿಧಿ, ಸುಧಾಕರ್, ಪೂರ್ಣೇಶ, ಜಯಂತ್, ಪ್ರಮೋದ್, ನಾಗಮ್ಮಚಿಕ್ಕ ಮಾದು, ವೆಂಕ ಟೇಶ್ ಪ್ರಸಾದ್, ಪಟೇಲ್ ನಾಗರಾಜ ಶೆಟ್ಟಿ, ಹೆಚ್ ಸಿ ಮಂಜುನಾಥ್, ಬಸವರಾಜ ಶೆಟ್ಟಿ, ರಂಗಸ್ವಾಮಿ, ರಾಜು ಬಿಡುಗಲು, ಚಾಕಹಳ್ಳಿ ಕೃಷ್ಣ, ನಿಂಗರಾಜು, ಕೃಷ್ಣ, ದೇವಣ್ಣ, ವೈ.ಟಿ.ಮಹೇಶ್, ಅನಿಲ್, ಅಂಗಡಿ ನರ ಸಿಂಹ, ಐಡಿಯಾ ವೆಂಕಟೇಶ್, ವಿನಯ್ ಭಜರಂಗಿ, ವಾಟರ್ ದಿನೇಶ್, ಅರುಣ್, ಪ್ರಸಾದಿ, ಮಾದೇಶ್, ಲೋಕೇಶ್, ಸಂತೋಷ್, ರಮೇಶ್ ಕುಲುಮೆ, ಕೃಷ್ಣ, ಸುಧಾಕರ, ಶ್ರೀನಿವಾಸ್ ಇದ್ದರು.

# ಮಹಿಳೆಯರು ಆರ್ಥಿಕವಾಗಿ ಸಬಲರಾಗಲಿ



ಹನೂರು: ಮಹಿಳೆಯರು ಆರ್ಥಿಕವಾಗಿ ಸಬಲರಾಗುವ ಮೂಲಕ ಕುಟುಂಬವನ್ನು ಸಹ ಆರ್ಥಿಕವಾಗಿ ಮುಂದೆ ತರಲು ಹೊಲಿಗೆ ತರಬೇತಿ ಅತ್ಯಂತ ಸಹಾಯಕವಾಗಿದೆ ಎಂದು ಶಿಶು ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ಪೂರ್ಣಿಮಾ ತಿಳಿಸಿದರು.

ತಾಲೂಕಿನ ಪ್ರಕಾಶ್ ಪಾಳ್ಯ ಗ್ರಾಮದ ಸದ್ವಿದ್ಯಾ ರೂರಲ್ ಕಮ್ಯೂನಿಟಿ ಕಾಲೇಜ್ ಆವರಣದಲ್ಲಿ ಹಮ್ಮಿ ಕೊಂಡಿದ್ದ ಹೊಲಿಗೆ ತರಬೇತಿ ಸಮಾರೋಪ ಸಮಾ ರಂಭವನ್ನು ಉದ್ಘಾಟನೆ ಮಾಡಿ ನಂತರ ಅವರು ಮಾತ ನಾಡಿದರು. ಪ್ರಸ್ತುತ ದಿನಮಾನಗಳಲ್ಲಿ ಗಗನಕ್ಕೇರುತ್ತಿರುವ ವಸ್ತುಗಳ ಬೆಲೆಯನ್ನು ನೋಡಿದಾಗ ಕೇವಲ ಕುಟುಂಬ ದಲ್ಲಿ ಒಬ್ಬರ ದುಡಿಮೆ ಸಾಕಾಗುತ್ತಿಲ್ಲ. ಪರಿಣಾಮ ಮಹಿ ಳೆಯರು ಸಹ ಕೌಶಲ್ಯಾಭಿವೃದ್ಧಿಯಲ್ಲಿ, ಕಸುಬು ಕಲಿತು ಕೊಂಡು ಆರ್ಥಿಕವಾಗಿ ಸಂಪಾದನೆ ಮಾಡಿದರೆ ಮಾತ್ರ ಕುಟುಂಬವು ಸಹ ಆರ್ಥಿಕವಾಗಿ ಮುಂದೆ ಬರಲು ಸಾಧ್ಯ ವಾಗುತ್ತದೆ. ಆ ನಿಟ್ಟಿನಲ್ಲಿ ಹೋಲಿ ಕ್ರಾಸ್ ಸದ್ವಿದ್ಯಾ ಕಾಲೇಜು ಹೊಲಿಗೆ ತರಬೇತಿ ನಡೆಸಿ ಪ್ರಥಮ ಹಂತದ ತಂಡವನ್ನು ಹೊರ ಕಳಿಸುತ್ತಿರುವುದು ಬೆಳವಣಿಗೆಯಾಗಿದೆ ಎಂದರು.

ಚಿಕ್ಕಲ್ಲೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಿವಕುಮಾರ್ ಮಾತನಾಡಿ ಮಹಿಳೆ ನಾಲ್ಕು ಗೋಡೆಗಳ ಮಧ್ಯೆ ಸಿಲುಕಿರುವಂತಹ ಕಾಲ ಪ್ರಸ್ತುತ ದಿನಮಾನಗಳಲ್ಲಿ ಇಲ್ಲ. ಈಗ ಎಲ್ಲಾ ಕ್ಷೇತ್ರಗಳಲ್ಲೂ ಸಹ ಮಹಿಳೆ ತನ್ನದೇ ಆದ ಪ್ರಾತಿನಿಧ್ಯತೆಯನ್ನು ಹೊಂದಿದ್ದಾರೆ. ಹಾಗಾಗಿ ಮಹಿಳೆಯರು ಯಾವುದೇ ಸಂಕೋಚವಿಲ್ಲದೆ ಕೌಶಲ್ಯಗಳನ್ನು ಕಲಿತುಕೊಂಡು ಸಮಾಸದಲ್ಲಿ ಬದುಕಲು ಹಿಂದರಿಯಬಾರದು ಅದಕ್ಕೆ ಪ್ರೋತ್ಸಾಹ ನೀಡಲು ಕನ್ಯಾಸ್ತ್ರಿಯರ ಬೆಂಬಲ ಸದಾ ನಿಮಗಿರುತ್ತದೆ. ನಮ್ಮ ಇಲಾಖೆ ವತಿಯಿಂದ ನಿಯಮಾನುಸಾರವಾಗಿ ಏನು ಮಾಡಬೇಕು ಎಂಬುದನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ತಮಗೆ ಸಹಾಯ ಮಾಡಲು ಇಚ್ಛಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಸದ್ವಿದ್ಯಾ ರೂರಲ್ ಕಮ್ಯೂನಿಟಿ ಕಾಲೇಜಿನ ಆಡಳಿತ ಅಧಿಕಾರಿ ಸಿಸ್ಟರ್ ಆನ್ನಿ, ಹೋಲಿ ಕ್ರಾಸ್ ಆಸ್ಪತ್ರೆಯ ನರ್ಸಿಂಗ್ ಮುಖ್ಯ ಅಧಿಕಾರಿ ಸಿಸ್ಟರ್ ರೋಸ್ಲಿನ್, ಸಿಸ್ಟರ್ ಟ್ರೀಜ, ಹಾಗೂ ಸಿಸ್ಟರ್ ಕ್ಲಾರ, ಶಿಕ್ಷಕಿ ರೇಣುಕಾ ಸೇರಿದಂತೆ ಸಿಬ್ಬಂದಿಗಳು ಹಾಗೂ ಮಕ್ಕಳು, ಮಹಿಳೆಯರು ಉಪಸ್ಥಿತರಿದ್ದರು.

**250 ಮಂದಿ ತಪಾಸಣೆ : ಅಗತ್ಯಯುಳ್ಳವರಿಗೆ ಉಚಿತ ಔಷಧಿ ವಿತರಣೆ**

# ಆಲೂರಿನಲ್ಲಿ ಉಚಿತ ಆರೋಗ್ಯ ತಪಾಸಣ ಶಿಬಿರ

ಚಾಮರಾಜನಗರ, ತಾಲೂಕಿನ ಆಲೂರಿನಲ್ಲಿ ಡಾ.ಎ. ಬಿ.ನಂಜಪ್ಪಅವರ ಎರಡನೇ ವರ್ಷ ದ ಸ್ಮರಣಾರ್ಥ : ಆಲೂರಿನಲ್ಲಿ ಉಚಿತ ಆರೋಗ್ಯ ತಪಾಸಣ ಶಿಬಿರ ನಡೆಯಿತು.

ತಾಲೂಕಿನ ಆಲೂರಿನ ಬಸವ ಮಂದಿರದಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಮೈಸೂರು, ಭಾರತೀಯ ವೈದ್ಯಕೀಯ ಸಂಘ, ರೋಟರಿ ಸಂಸ್ಥೆ, ಚಾಮರಾಜನಗರ ತಾಲ್ಲೂಕು ಔಷಧಿ ವ್ಯಾಪಾರಿಗಳ ಸಂಘ,ವೀರಶೈವ ಲಿಂಗಾಯತ ಸಮಾಜ ಆಲೂರು. ಇವರ ಸಹಯೋಗದಲ್ಲಿ ಡಾ. ಎ.ಬಿ. ನಂಜಪ್ಪ ಅವರ ಎರಡನೇ ವರ್ಷ ದ ಸ್ಮರಣಾರ್ಥ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ 250 ಮಂದಿ ಆರೋಗ್ಯ ತಪಾ ಸಣೆ ಮಾಡಿಸಿಕೊಂಡರು. ಅಗತ್ಯಯುಳ್ಳವರಿಗೆ ಉಚಿತ ಔಷಧಿ ವಿತರಿಸಲಾಯಿತು. ಕಾರ್ಯಕ್ರಮದ ನೇತೃತ್ವ ವಹಿ ಸಿದ್ದ ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷೆ ಡಾ.ಡಿ. ಶೀಲಾಕುಮಾರಿ ಡಾ.ಎ.ಬಿ.ನಂಜಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾತನಾಡಿ, ನನ್ನ ಪೂಜ್ಯ ಪತಿಯವರಾದ ಎ.ಬಿ. ನಂಜಪ್ಪ ಅವರ ಎರಡನೇ ವರ್ಷ ದ



ಸ್ಮರಣಾರ್ಥ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿ ಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಶಿಬಿರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಅಯೋಜನೆ ಮಾಡಲಾಗುವುದು ಎಂದರು. ಶಿಬಿರದಲ್ಲಿ ಎ.ಎನ್. ಬಿನೇಶ್, ಡಾ.ಬಸವರಾಜೇಂದ್ರ, ಡಾ.ಅಭಿಷೇಕ್, ಡಾ.ಶ್ವೇತಬಸವರಾಜೇಂದ್ರ, ಡಾ.ಶಿವಶಂಕರ್, ಡಾ. , ಡಾ.ಅಸಯ್ ಕುಮಾರ್ ಜೈನ್, ಡಾ.ಸಹನಾ, ಡಾ.ಚಂದನ್, ರೋಟರಿ ಅಧ್ಯಕ್ಷ ಚಂದ್ರಶೇಖರ್, ವೀರಶೈವ ಲಿಂಗಾಯತ ಸಮಾಜ ಅಧ್ಯಕ್ಷ ಎ.ಆರ್. ಚಂದ್ರಪ್ಪ, ಕಾರ್ಯದರ್ಶಿ ನಂದೀಶ್, ಗೌಡಿಕೆ ಶಿವಪ್ಪ, ಬಿರ್ಲಾ ನಾಗರಾಜು, ಎ.ಜೆ.ಸಚಿನ್ ಹಾಜರಿದ್ದರು.

## ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ -2: ಲೋಪವಿಲ್ಲದೆ ಪಾರದರ್ಶಕವಾಗಿ ನಡೆಸಿ

# ಸಿಸಿಟಿವಿ ಕಣ್ಗಾವಲಿನಲ್ಲಿ ಪೂರಕ ಪರೀಕ್ಷೆ: ಡಾ.ಕುಮಾರ

**ಮಂಡ್ಯ:** ಏಪ್ರಿಲ್ 30 ರಿಂದ ಮೇ 13 ವರೆಗೆ ನಡೆಯಲಿರುವ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯು ಬೆಳಿಗ್ಗೆ 10 ಗಂಟೆಯಿಂದ 1 ಗಂಟೆಯವರೆಗೆ ಹಾಗೂ 13 ರಂದು ಬೆಳಿಗ್ಗೆ 10 ಗಂಟೆ ಯಿಂದ 1 ಗಂಟೆ ಹಾಗೂ ಮಧ್ಯಾಹ್ನ 2 ಗಂಟೆ ಗಂಟೆಯಿಂದ 4.15 ಗಂಟೆಯ ವರಿಗೆ ನಡೆಯಲಿದ್ದು ಪರೀಕ್ಷೆಯಲ್ಲಿ ಯಾವುದೇ ಲೋಪ ಉಂಟಾಗದಂತೆ ಪಾರದರ್ಶಕವಾಗಿ ನಡೆಯಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.




ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪಿಯುಸಿ ಪೂರಕ ಪರೀಕ್ಷೆಯನ್ನು ಸುವ್ಯವಸ್ಥಿತವಾಗಿ ನಡೆಸುವ ಕುರಿತು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸದರಿ ವರ್ಷದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯನ್ನು 2877 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದಾರೆ ಎಂದು ಹೇಳಿದರು.

ಜಿಲ್ಲೆಯಲ್ಲಿ 07 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ನಡೆಯಲಿದೆ. ಪರೀಕ್ಷೆ ಸಮಯದಲ್ಲಿ ಪರೀಕ್ಷಾ ಕೇಂದ್ರ 200 ಮೀಟರ್ ವ್ಯಾಪ್ತಿಯಲ್ಲಿ ಜೆರಾಕ್ಸ್ ಹಾಗೂ ಸೈಬರ್ ಕೇಂದ್ರಗಳನ್ನು ಮುಚ್ಚಲಾಗುವುದು. ಜಿಲ್ಲಾ ಖಜಾನೆಯಿಂದ ಪ್ರಶ್ನಾ ಪತ್ರಿಕೆಯನ್ನು ಸಾಗಿಸುವಾಗ ಬೀಗಿ ಭದ್ರತೆಯನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಪ್ರಶ್ನಾ ಪತ್ರಿಕೆ ಸಾಗುವ 7 ಮಾರ್ಗದಲ್ಲಿ ರೂಟ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪ್ರಶ್ನಾ ಪತ್ರಿಕೆ ಸಾಗಿಸುವ ವಾಹನಗಳಲ್ಲಿಗೆ ಕಡ್ಡಾಯವಾಗಿ ಜಿ.ಪಿ.ಎಸ್ ಅಳವಡಿಸಿರಬೇಕು. ಜಿಲ್ಲಾಧಿಕಾರಿ ಕಚೇರಿಯಲ್ಲಿ ವೆಬ್ ಕಾಸ್ಟಿಂಗ್ ನಡೆಯಲಿದ್ದು ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದರು.


**ಸಿಸಿಟಿವಿ ಕಣ್ಗಾವಲು:** ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಸಿಸಿಟಿವಿ ಕಣ್ಗಾವಲಿನಲ್ಲಿ ನಡೆಯಲಿದ್ದು ಕ್ಯಾಮೆರಾಗಳನ್ನು ಪರೀಕ್ಷಾ ಕೊಠಡಿಗಳಿಗೆ ಈಗಾಗಲೇ ಅಳವಡಿಸಲಾಗಿದೆ. 7 ಪರೀಕ್ಷಾ ಕೇಂದ್ರ ಕೊಠಡಿಯಲ್ಲಿ ಸಿಸಿಟಿವಿ ಕಡ್ಡಾಯವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಪರೀಕ್ಷೆ ಸಮಯದಲ್ಲಿ ಸಿಸಿಟಿವಿಗಳಲ್ಲಿ ತಾಂತ್ರಿಕ ದೋಷ ಉಂಟಾಗುತ್ತದೆ ಕ್ರಮ ವಹಿಸಬೇಕು. ಪರೀಕ್ಷೆ ನಡೆಯುವ ಸಮಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಬೇಕು ಎಂದು ಸೂಚಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಮೂಲ ಸೌಕರ್ಯ ಕಲ್ಪಿಸಿ

ಕುಡಿಯುವ ನೀರು, ಸೂಕ್ತ ಆಸನ ವ್ಯವಸ್ಥೆ ಹಾಗೂ ಪರೀಕ್ಷಾ ಕೊಠಡಿಯಲ್ಲಿ ಗಡಿಯಾರದ ಜೊತೆಗೆ ಮೂಲ ಭೂತ ಸೌಕರ್ಯಗಳನ್ನು ಕಲ್ಪಿಸಿ. ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಸಿಬ್ಬಂದಿ, ಪೊಲೀಸ್ ಬಂದೋಬಸ್ತ್ ಹಾಗೂ ನಿರಂತರ ವಿದ್ಯುತ್ ಸರಬರಾಜು ಮಾಡಬೇಕು. ಗ್ರಾಮೀಣ ಭಾಗದಿಂದ ಮಕ್ಕಳು ಬರುವುದರಿಂದ ಬಸ್ ಗಳು ಪರೀಕ್ಷಾ ದಿನದಂದು ವಿಳಂಬವಾಗದಂತೆ ಕ್ರಮ ವಹಿಸಿ ಎಂದು ಹೇಳಿದರು. ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸ್ಮಾರ್ಟ್ ಡಿವೈಸ್ ಗಳನ್ನು ಕೊಠಡಿಗೆ ತರಲು ಬಿಡಬೇಡಿ. ಪರೀಕ್ಷೆ ಮೇಲ್ವಿಚಾರಣೆಗೆ ನೇಮಿಸಿರುವ ಶಿಕ್ಷಕರು ಮಾರ್ಗ ಸೂಚಿಗೆ ಬದ್ಧರಾಗಿ ಕರ್ತವ್ಯ ಪಾಲಿಸಬೇಕು. ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಚಿತ್ರೀಕರಣ ಮಾಡಲು ಯಾರಿಗೂ ಅನುಮತಿ ನೀಡಬಾರದು ಎಂದು ಹೇಳಿದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ ಚಲುವಯ್ಯ,ಆರ್. ಸಿ. ಹೆಚ್ ಅಧಿಕಾರಿ ಕೆ. ಪಿ.ಅಶ್ವಥ್, ನಗರ ಸಭೆಯ ಪರಿಸರ ಅಭಿಯಂತರರು ರುದ್ರೇಗೌಡ,ಜಿಲ್ಲಾ ಖಜಾನೆಯ ಉಪ ನಿರ್ದೇಶಕರಾದ ವರಲಕ್ಷ್ಮಿ, ಕುಟುಂಬ ಕಲ್ಯಾಣಾಧಿಕಾರಿ ಬೆಟ್ಟಸ್ವಾಮಿ, ವಿವಿಧ ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

## ನಾಲ್ವಡಿ ಜಯಂತಿ: ಅಕ್ಷರ ಜಾತ್ರೆಗೆ ಕವನಗಳು, ಪ್ರಶಸ್ತಿಗೆ ಹೆಸರುಗಳ ಆಹ್ವಾನ



**ಮಂಡ್ಯ:** ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ಜಯಂತಿ ಅಂಗವಾಗಿ ಇದೇ ಜೂನ್ 7ರಂದು ಭಾನುವಾರ ಮಂಡ್ಯ ನಗರದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ 17ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರಜಾತ್ರೆ ಆಯೋಜಿಸಿದ್ದು, ಆಸಕ್ತ ಕವಿಗಳಿಂದ ಕವನಗಳನ್ನು ಹಾಗೂ ವಿವಿಧ ಪ್ರಶಸ್ತಿಗೆ ಸಾಧಕರಿಂದ ಹೆಸರನ್ನು ಆಹ್ವಾನಿಸಲಾಗಿದೆ.

ಆಸಕ್ತರು 25 ಸಾಲಿನ ಎರಡು ಕವನಗಳು, ಕಿರು ಪರಿಚಯ, ಪೋಟೋ, ಮೊಬೈಲ್ ಸಂಖ್ಯೆ, ವಿಳಾಸವನ್ನು ಮತ್ತು ಸಾಧಕರು ಸಾಧನೆಯ ವಿವರಗಳನ್ನು ಮೇ 15ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು, ಸಾದನೆಯ ವಿವರಗಳನ್ನು ಕಳಿಸಬೇಕು. ಕವನ ಯಾವುದಾದರೂ ವಿಷಯವನ್ನು ಒಳಗೊಂಡಿರಬಹುದು. ಆಯ್ಕೆಯಾದ ಕವಿತೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗುವುದು. ಐವತ್ತು ಮಂದಿ ಕವಿಗಳಿಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. ಉತ್ತಮ ಸಾಧಕರನ್ನು ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು. ಕವಿಗೋಷ್ಠಿಯಲ್ಲಿ ಭಾಗವಹಿಸುವವರಿಗೆ ಕವನ ವಾಚನಕ್ಕೆ ಅವಕಾಶ, ಪ್ರಮಾಣ ಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು.

ಹತ್ತು ಉತ್ತಮ ಕವನಗಳಿಗೆ ಕಾವ್ಯಶ್ರೀ ಹಾಗೂ ತಲಾ ಹತ್ತು ಮಂದಿ ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್, ಕನ್ನಡರತ್ನ, ಸಮಾಜ ಸೇವಾ ರತ್ನ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುವುದು. ಕವಿಗಳು, ಕವನಗಳು, ಸಾಧಕರು ಪರಿಚಯವನ್ನು ವಿಳಾಸ: ಎಸ್.ಕೃಷ್ಣಸ್ವರ್ಣಸಂದ್ರ, ಕವಿಮಿತ್ರ, ನಂ–767, ಸ್ವರ್ಣಸಂದ್ರ, ಮಂಡ್ಯ–2 ಕಳುಹಿಸಬೇಕು. ವ್ಯಾಟ್ಸಾಪ್ ಮೂಲಕವೂ ನಂ–9448424380ಗೆ ಕಳುಹಿಸಬೇಕಾಗಿ ಡಾ.ಜೀಶಂಪ ಸಾಹಿತ್ಯ ವೇದಿಕೆ ಮನವಿ ಮಾಡಿದೆ.

# ಪಿರಿಯಾಪಟ್ಟಣ : ಎಫ್ ಐ ಡಿ ವಿರೋಧಿಸಿ ಪರಿಕರ ಮಾರಾಟಗಾರರ ಪ್ರತಿಭಟನೆ

**ಪಿರಿಯಾಪಟ್ಟಣ :** ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕೇಂದ್ರ ಸರ್ಕಾರ ಹೊರಡಿಸಿರುವ ಎಫ್ ಐ ಡಿ ವಿರುದ್ಧ ತಾಲ್ಲೂಕು ಕೃಷಿ ಪರಿಕರ ಮಾರಾಟಗಾರರ ಸಂಘದ ವತಿಯಿಂದ ಪಟ್ಟಣದಲ್ಲಿ ಸೋಮವಾರ ಸಾಮೂಹಿಕ ಪ್ರತಿಭಟನೆ ನಡೆಸಿದರು



ಏ.27 ರಂದು ರಾಷ್ಟ್ರವ್ಯಾಪ್ತಿ ಕೃಷಿ ಪರಿಕರಗಳಾದ ರಸಗೊಬ್ಬರ,ಬಿತ್ತನೆ ಬೀಜ,ಕ್ರಿಮಿನಾಶಕ ವಿತರಣೆ ಅಂಗಡಿಗಳ "ನಮ್ಮ ಹಕ್ಕು,ನಮ್ಮ ಒಗ್ಗಟ್ಟು,ನಮ್ಮ ಯಶಸ್ಸು "ಎಂಬ "ಒಂದು ದಿನ ಸಂಪೂರ್ಣ ಬಂದ್ "ಗೆ ಕರೆ ನೀಡಿತ್ತು.ಈ ಹಿನ್ನೆಲೆಯಲ್ಲಿ ತಾಲ್ಲೂಕು ಕೃಷಿ ಪರಿಕರ ಮಾರಾಟಗಾರರ ಸಂಘದ ವತಿಯಿಂದ ಪಟ್ಟಣದ ಬಿ ಎಂ ರಸ್ತೆಯ ಬಸವೇಶ್ವರ ವೃತ್ತದಿಂದ ಪ್ರತಿಭಟನೆಯನ್ನು ಪ್ರಾರಂಭಿಸಿ ರಸ್ತೆ ಉದ್ದಕ್ಕೂ " ಜೈ ಜವಾನ್,ಜೈ ಕಿಸಾನ್ " ಜೈಕಾರದಲ್ಲಿ ತಹಸೀಲ್ದಾರ್ ಮತ್ತು ಕೃಷಿ ಅಧಿಕಾರಿಗಳ ಕಚೇರಿಗಳಿಗೆ ತೆರಳಿ ವಿವಿಧ ಬೇಡಿಕೆಗಳನ್ನು ಈಡೇರುಸುವಂತೆ ಮನವಿ ಪತ್ರ ಸಲ್ಲಿಸುವ ಮೂಲಕ ಶಾಂತಿಯುತವಾಗಿ ಬಂದ್ ಗೆ ಸಹಕಾರ ನೀಡಿದರು.

ಈ ವೇಳೆ ತಾಲೋಕು ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ಮನ್ಸೂನ್ ಚಂದ್ರು ಮಾತನಾಡಿ ರಸಗೊಬ್ಬರ ವಿತರಿಸುವ ವೇಳೆ ಯಾವುದೇ ವಿಧದಲ್ಲೂ ಬಾಡಿಗೆ ಇಲ್ಲದೆ ಡೆಲಿವರಿ ನೀಡಬೇಕು.ಡಿಎಪಿ, ಯೂರಿಯಾ ಗೊಬ್ಬರದ ಜತೆಯಲ್ಲಿ ಬೇರೆ ಗೊಬ್ಬರಗಳನ್ನು ಒತ್ತಾಯ ಪೂರಕವಾಗಿ ಲಿಂಕ್ ಗೊಳಿಸಬಾರದು,ಎಲ್ಲಾ ರಸಗೊಬ್ಬರಗಳ ಮೇಲೆ ಶೇ.8% ರಷ್ಟು ಲಾಭಾಂಶ ಬರುವ ಹಾಗೆ ನೋಡಿಕೊಳ್ಳಬೇಕು ಹಾಗೆಯೇ ಎಫ್ ಐ ಡಿ ಮುಖಾಂತರ ಯೂರಿಯಾ,ಡಿಎಪಿ ಗೊಬ್ಬರವನ್ನು ಹಿಂಗಾರು ಬೆಳೆಯ ತನಕ ಮಾರಾಟ ಮಾಡುವುದಕ್ಕೆ ನಿಷೇದ ಏರಬಾರದು, ಬೆಳೆಗಳ ಆದಾರದ ಮೇಲೆ ರಸಗೊಬ್ಬರ ದೊರಕುವಂತೆ ಗಮನ ಹರಿಸಬೇಕು,ಸಾತಿ ಪೋರ್ಟಲ್ ಮಾಸೂದೆಯನ್ನು ನಿಷೇದಿಸಿ ಬಿತ್ತನೆ ಬೀಜ (ಜನ ಸ್ನೇಹಿ ಆಪ್ )ನ್ನು ಜಾರಿಗೊಳಿಸಬೇಕು ಮತ್ತು ಡೀಲರ್ ಗಳು ಸ್ಯಾಂಪಲ್ ಡ್ರಾಗೊಳಿಸಿದ ಹಣವನ್ನು ವಾಪಸ್ಸು ಮರುಪಾವತಿಯಾಗುವಂತೆ ಸಹಕಾರ ನೀಡಬೇಕು ಮತ್ತು ಅಧಿಕಾರಿಗಳು ಮಾರಾಟ ಮಳಿಗೆಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ದಾಳಿ ಎಂದು ಮಾಧ್ಯಮಗಳಲ್ಲಿ ಬಿಂಬಿಸುವುವ ಬದಲು ತಪಾಷಣೆ ಎಂದು ಹೇಳಿದಾಗ ನಾವು ಅಧಿಕಾರಿಗಳಿಗೆ ಸ್ಪಂದಿಸುವುದಲ್ಲದೆ ರೈತರಿಗೆ ಗುಣಮಟ್ಟದ ಕೃಷಿ ಸಾಮಗ್ರಿಗಳನ್ನು ಒದಗಿಸಲು ಸಹಕಾರವಾಗುತ್ತದೆ ಎಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಿದರು.

ಈ ವೇಳೆ ಸಂಘದ ಪ್ರಧಾನ ಕಾರ್ಯದರ್ಶಿ ಎಂ ಎ ನಾಗೇಶ್ ತಹಸೀಲ್ದಾರ್ ಹಾಗೂ ಕೃಷಿ ಅಧಿಕಾರಿಗಳ ಮುಂದೆ ತಮ್ಮ ವಿವಿಧ ಬೇಡಿಕೆಗಳನ್ನು ಓದಿ ಮಂಡಿಸಿದರೆ, ಕೃಷಿ ಅಧಿಕಾರಿ ಸಿ ಆರ್ ಮಹೇಶ್ ತಮ್ಮ ಬೇಡಿಕೆಗಳನ್ನು ಮೇಲಿನ ಅಧಿಕಾರಿಗಳಿಗೆ ತಿಳಿಸಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಸಂಪೂರ್ಣ ಸಹಕಾರ ನೀಡುವ ಭರವಸೆ ನೀಡಿದರು.

ಉಪಾಧ್ಯಕ್ಷರಾದ ನಂದೀಶ್,ಗೌರೀಶ್,ಖಜಾಂಚಿ, ಟಿ ಕೆ ಪ್ರಸಾದ್, ಸಂಘದ ಪದಾಧಿಕಾರಿಗಳು,ಸದಸ್ಯರು ಸೇರಿದಂತೆ ಇನ್ನಿತರರಿದ್ದರು.

# ಗ್ರಾ.ಪಂಗಳ ವಿದ್ಯುತ್ ಬಿಲ್ ಬಾಕಿ ಸರ್ಕಾರವೇ ಭರಿಸಲಿ: ಕಾಡಶೆಟ್ಟಿಹಳ್ಳಿ ಸತೀಶ್ ಆಗ್ರಹ

**ಮಂಡ್ಯ:** ರಾಜ್ಯದ ಗ್ರಾ.ಪಂಗಳಲ್ಲಿನ ಕುಡಿಯುವ ನೀರು ಸರಬರಾಜು ಘಟಕ ಮತ್ತು ಬೀದಿ ದೀಪಗಳ ವಿದ್ಯುತ್ ಬಿಲ್ ಬಾಕಿಯನ್ನು ರಾಜ್ಯ ಸರಕಾರವೇ ಭರಿಸಬೇಕು ಎಂಉ ಕರ್ನಾಟಕ ರಾಜ್ಯ ಗ್ರಾ.ಪಂ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾ.ಪಂಗಳಲ್ಲಿ 2015ರಿಂದ 2023ರವರೆಗೆ ಬಾಕಿ ಇರುವ 5,257.70 ಕೋಟಿ ರೂ ಗಳನ್ನು 1,252.20 ಕೋ ರೂ. ಎಸ್ಕಾಂ ಬಾಕಿಯನ್ನು 2024ರ ಖಾತರೀಕರಣದ ಮೂಲಕ ತಿರುವಳಿ ಮಾಡುವಂತೆ ಹಣಕಾಸು ಆಯೋಗ ಆದೇಶ ನೀಡಿದೆ. ಆದರೂ ಜಿ.ಪಂ ಇದರ ಇತ್ಯರ್ಥಕ್ಕೆ ಮುಂದಾಗಿಲ್ಲ ಎಂದು ಆರೋಪಿಸಿದರು.

ಗ್ರಾಮಗಳಿಗೆ ಕುಡಿಯುವ ನೀರಿನ ಕೊಳವೆಬಾವಿ ಕೊರೆಸಿದ ಜಿ.ಪಂ ವಿದ್ಯುತ್ ಸಂಪರ್ಕ ಮಾಡಿಸಿಕೊಂಡು ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು ಮಾಡುತ್ತಿದೆ. ಆದರೆ ವಿದ್ಯುತ್ ಜಾಗೃತ ದಳದವರು ಗ್ರಾ.ಪಂಗಳಿಗೆ ದಂಡ ವಿಧಿಸಿದ್ದಾರೆ ಎಂದು ದೂರಿದರು.

ಅಲ್ಲದೇ ವಿದ್ಯುತ್ ಸರಬರಜು ಕಂಪನಿಗಳು ನೀರು ಸರಬರಾಜು ಮಾಡಲು ಹಾಗೂ ಬೀದಿ ದೀಪಗಳಿಗೆ ಯವುದೆ ಮೀಟರ್ ಅಳವಡಿಕೆ ಮಾಡದೇ ವಿದ್ಯುತ್ ಬಿಲ್ ಹೊರಿಸುತ್ತಿದ್ದಾತೆ. ಜತೆಗೆ ಈಗ ಎಲ್‌ಇಡಿ ಬೀದಿದೀಪಗಳ ಅಳವಡಿಕೆಯಿದ್ದರೂ.

ಹಾಲೋಜಿನ್‌ಗೆ ಹಾಕುತ್ತಿದ್ದ ಮೊತ್ತದ ಶುಲ್ಕವನ್ನು ಸರಾಸರಿ ಆಧಾರದ ಮೇಲೆ ವಿಧಿಸುತ್ತಿದ್ದಾರೆ ಎಂದು ಖಂಡಿಸಿದರು.

ಜಿ.ಪಂ ಸಿಇಓ ಅವರು ಸೆಸ್ಕ್ ಅಧಿಕಾರಿಗಳ ಜತೆ ಕುಳಿತು ಸಮಸ್ಯೆ ಬಗೆಹರಿಸಲು ಮುಂದಾಗಬೇಕು. ನೀರು ಸರಬರಾಜು ಯೋಜನೆಗಳ ಸ್ಥಾವರ, ಬೀದಿ ದೀಪಗಳಿಗೆ ಮೀಟರ್ ಅಳವಡಿಸಬೇಕು. ಬೆಳಗಾವಿ ಜಿ.ಪಂನಂತೆ ಇಂಧನ ಲೆಕ್ಕಪರಿಶೋಧನೆ ಮಾದರಿ ಹಾಗೂ ದಾವಣಗೆರೆ ಜಿ.ಪಂ, ಹೊನ್ನಾಳಿ ತಾಲೂಕು ಸಮನ್ವಯ ಮಾದರಿಯ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಅಳವಡಿಸಬೇಕು ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಒಕ್ಕೂಟ ರಾಜ್ಯ ಸಂಚಾಲಕ ನಾಗೇಶ್, ಜಿಲ್ಲಾಧ್ಯಕ್ಷ ಪ್ರದೀಪ್‌ಕುಮಾರ್, ಎಂ.ಚಾಮರಾಜು, ಎಸ್.ಸುವರ್ಣಾವ, ಅರ್ಪಿತ, ಕೆಂಪರಾಜು ಇದ್ದರು.

# ಮೇ.1ರಂದು ಬೌದ್ಧ ಪೂರ್ಣಿಮೆ ಕಾರ್ಯಕ್ರಮ




**ಮಂಡ್ಯ:** ಬುದ್ಧ ಭಾರತ ಫೌಂಡೇಶನ್ ವತಿಯಿಂದ ಮೇ.1ರಂದು ಶೀರಂಗಪಟ್ಟಣ ತಾಲೂಕಿನ ನೇರಲಕೆರೆ ಗ್ರಾಮದಲಿರುವ ಬುದ್ಧ ಭಾರತ ಫೌಂಡೇಶನ್ ಆವರಣದಲ್ಲಿ ಬೌದ್ಧ ಪೂರ್ಣಿಮೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷ ಜೆ.ರಾಮಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬುದ್ಧರ ತತ್ವಗಳನ್ನು ರಾಜ್ಯದ ಜನತೆಗೆ ಹಾಗೂ ರಾಷ್ಟ್ರಕ್ಕೆ ಪುನರ್ ಪರಿಚಯ ಮಾಡುವ ಸಂಬಂಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಕಲ್ಲರಪುರ ಮಹದೇವ ಅವರು ಬುದ್ಧರ ತತ್ವ ವಿಚಾರಗಳನ್ನು ತಿಳಿಸಲಿದ್ದಾರೆ. ಜಿಲ್ಲಾಧಿಕಾರಿ, ಜಿ.ಪ. ಸಿಇಓ, ಎಸ್ಪಿ, ಪ್ರಗತಿಪರ ಚಿಂತಕರು, ಸಂಘಟನೆಗಳ ಮುಖಂಡರು, ಬೌದ್ಧ ಧಮ್ಮ ಅನುಯಾಯಿಗಳು ಅಂಬೇಡ್ಕರ್ ಅಭಿಮಾನಿಗಳು ಇನ್ನಿತರ ದಾರ್ಶನಿಕ ವ್ಯಕ್ತಿಗಳ ಅನುಯಾಯಿಗಳು ಸೇರಿದಂತೆ ಹಲವು ಗಣ್ಯರು ಭಾಗವಹಿಸುವರು ಎಂದು ಹೇಳಿದರು.

ಗೋಷ್ಠಿಯಲ್ಲಿ ಕನ್ನಡಪರ ಹೋರಾಟಗಾರ ರಾಜುಗೌಡ, ಮಿತುನ್, ಅಮ್ಜದ್ ಪಾಷಾ, ಅಶೋಕ, ಪ್ರಶಾಂತ್, ಸ್ವಾಮಿ ಇತರರಿದ್ದರು.

## ಸೆಮಿಕಂಡಕ್ಟರ್ ಘಟಕಕ್ಕೆ ಮಂಡ್ಯದಲ್ಲಿ 100 ಎಕರೆಗೂ ಹೆಚ್ಚು ಸರ್ಕಾರಿ ಭೂಮಿ ಲಭ್ಯ: ಕೆ.ಆರ್. ರವೀಂದ್ರ

**ಮಂಡ್ಯ:** ಅಮೆರಿಕ ಮೂಲಕ ಸ್ಯಾನ್ಸನ್ ಸಂಸ್ಥೆಯಿಂದ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಘಟಕ ಸ್ಥಾಪನೆಗೆ ಜಿಲ್ಲೆಯಲ್ಲಿ ನೂರು ಎಕರೆಗೂ ಹೆಚ್ಚಿನ ಸಕರಾರಿ ಭೂಮಿ ಲಭ್ಯವಿದೆ ಎಂದು ಸಾಮಾಜಿಕ ಕಾರ್ಯಕರ್ತರ ಕೆ.ಆರ್.ರವೀಂದ್ರ ತಿಳಿಸಿದರು.




ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಮಂಡ್ಯ ತಾಲೂಕಿನ ಕೊತ್ತತ್ತಿ ಹೋಬಳಿಯ ರಾಗಿಮುದ್ದನಹಳ್ಳಿ ಗ್ರಾಮದ ಸರ್ವೆ ನಂ 81ರಲ್ಲಿ 118 ಎಕರೆ 31 ಗಂಟೆ ಇದಕ್ಕೆ ಹೊಂದಿಕೊಂಡಂತೆ ಶ್ರೀರಂಗಪಟ್ಟಣ ತಾಲೂಕಿನ ಕೆ.ಶೆಟ್ಟಹಳ್ಳಿ 2ರ ಹೋಬಳಿಯ ಸಿದ್ದಾಪುರ ಗ್ರಾಮದ ಸರ್ವೇ ನಂ 93ರಲ್ಲಿ 33 ಎಕರೆ 28 ಗುಂಟೆ ಸರಕಾರಿ ಗೋಮಾದ ಜಮೀನಿದೆ ಎಂದರು.

ಇದರಲ್ಲಿ ಸೆಮಿ ಕಂಡಕ್ಟರ್ ಫ್ಯಾಬ್ರಿಕೇಷನ್ ಘಟಕ ಸ್ಥಾಪನೆಗೆ ಬೇಕಾದ 100 ಎಕರೆಗೂ ಹೆಚ್ಚನ ಭೂಮಿ ದೊರೆಯಲಿದೆ. ಆದರೆ ಬಸರಾಳಿನಲ್ಲಿ ಎಆರ್‌ಎಐ ಸಂಸ್ಥೆಯ ಕಾರ್ಖಾನೆ ಸ್ಥಾಪನೆಗೆ ಕೈಗಾರಿಕಾ ವಲಯದ ಜಾಗ ಇದೆ ಎಂದು ಸರಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದು, ಅಲ್ಲಿ ಅಗತ್ಯಕ್ಕೆ ತಕ್ಕಂತ ಭೂಮಿ ಲಭ್ಯವಿಲ್ಲ ಎಂದು ಹೇಳಿದರು.

ಜಿಲ್ಲೆಯ ಪಾಂಡವಪುರ, ಕೆ.ಆರ್.ಪೇಟೆ, ಶ್ರೀರಂಗಪಟ್ಟಣ ಮಳವಳ್ಳಿ, ನಾಗಮಂಗಲ ತಾಲೂಕುಗಳಲ್ಲಿ ಸಾವಿರಾರು ಎಕರೆಯ ಖಾಲಿ ಭೂಮಿ ಇದೆ. ಜಿಲ್ಲೆಯಲ್ಲಿ ಒಟ್ಟು 90 ಸಾವಿರ ಎಕರೆಗೂ ಹೆಚ್ಚು ಗೋಮಾಳದ ಭೂಮಿಯಿದೆ. ಆದರೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಕಚ್ಚಾಟದಿಂದಾಗಿ ಮಂಡ್ಯ ಜಿಲ್ಲೆ ಕೈಗಾರಿಕೆಯಿಂದ ವಂಚಿತವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

# ವಿದ್ಯುತ್ ಘಟಕಕ್ಕೆ ನೀರು ಹರಿಸುತ್ತಿರುವ ಅಧಿಕಾರಿಗಳು: ಆಕ್ರೋಶ

**ಕೆ.ಆರ್.ಪೇಟೆ:** ರೈತರ ಹೊಲ ಗದ್ದೆಗಳಿಗೆ ಹರಿಯಬೇಕಾಗಿದ್ದ ಹೇಮೆಯ ನೀರು ಇಂಜಿನಿಯರುಗಳ ಕೈಚಳಕದಿಂದ ಖಾಸಗಿ ಕಿರುವಿದ್ಯುತ್ ಉತ್ಪಾದನಾ ಘಟಕಗಳಿಗೆ ಹರಿಯುತ್ತಿದ್ದು ರೈತರ ಬೆಳೆಗಳು ಬಿರು ಬೇಸಿಗೆಯ ಝಳಕ್ಕೆ ಸಿಲುಕಿ ಒಣಗಲಾರಂಭಿಸಿವೆ.



ಕಳೆದ ಒಂದು ಶತಮಾನಗಳ ಹಿಂದೆಯೇ ಹೇಮೆಯ ನೀರನ್ನು ರೈತರ ಕೃಷಿ ಭೂಮಿಗೆ ಹರಿಸಲು ಅಂದಿನ ಮೈಸೂರು ಅರಸರು ತಾಲೂಕಿನ ಮಂದಗೆರೆ ಮತ್ತು ಹೇಮಗಿರಿಯ ಬಳಿ ತಲಾ ಒಂದೊಂದು ನದಿ ಒಡ್ಡು ಅಣೆಕಟ್ಟೆಗಳನ್ನು ನಿರ್ಮಿಸಿದ್ದಾರೆ. ಮಂದಗೆರೆ ಎಡದಂಡೆ ನಾಲೆ 33 ಕಿ.ಮಿ ಉದ್ದ ಹರಿದರೆ ಮಂದಗೆರೆ ಬಲದಂಡೆ ನಾಲೆ 56 ಕಿ.ಮೀ ಉದ್ದವಿದೆ. ಹೇಮಗಿರಿ ನಾಲೆ 37 ಕಿ.ಮೀ ಉದ್ದವಿದ್ದು ಈ ಮೂರು ನಾಲೆಗಳಿಂದ ತಾಲೂಕಿನ 16,556 ಎಕರೆ ಪ್ರದೇಶ ಸಂಪೂರ್ಣ ನೀರಾವರಿಗೆ ಒಳಪಟ್ಟಿದೆ. ಸದರಿ ನಾಲಾ ಬಯಲಿನ ವ್ಯಾಪ್ತಿಯಲ್ಲಿ ಶೇ.80 ರಷ್ಟು ರೈತರು ಭತ್ತ ಮತ್ತು ಕಬ್ಬು ಬೆಳೆದರೆ ಉಳಿದಂತೆ ತೆಂಗು, ಅಡಿಕೆ, ಬಾಳೆ ಮುಂತಾದ ವಾಣಿಜ್ಯ ಬೆಳೆಗಳಿವೆ.

ಮಂದಗೆರೆ ಮತ್ತು ಹೇಮಗಿರಿ ನದಿ ಅಣೆಕಟ್ಟೆ ನಾಲೆಗಳು ಹೇಮಾವತಿ ನದಿಯ ನೀರಿನ ಒಳ ಹರಿವನ್ನು ಆಧರಿಸಿ ರೈತರಿಗೆ ನಿರೊದಗಿಸುತ್ತವೆ. ಬೇಸಿಗೆ ಬೆಳೆಯ ಬಗ್ಗೆ ನೀರಾವರಿ ಇಲಾಖೆ ಪ್ರಸಕ್ತ ಸಾಲಿನಲ್ಲಿ ಯಾವುದೇ ಮಾಹಿತಿ ನೀಡದ ಪರಿಣಾಮ ಈ ನಾಲೆಗಳ ವ್ಯಾಪ್ತಿಯಲ್ಲಿ ರೈತರು ಭತ್ತದ ನಾಟಿ ಮಾಡಿದ್ದು ಸಂವೃದ್ಧ ಫಸಲಿನ ನೀರಿಕ್ಷೆಯಲ್ಲಿ ರೈತರಿದ್ದಾರೆ. ಕೆ.ಆರ್.ಎಸ್ ಅಣೆಕಟ್ಟೆಗೂ ಪೂರ್ವದ ನಾಲೆಗಳಾಗಿರುವುದರಿಂದ ಸದರಿ ನಾಲೆಗಳು ಕಾವೇರಿ ಜಲ ವಿವಾದದ ವ್ಯಾಪ್ತಿಗೆ ಬರುವುದಿಲ್ಲ. ಆದ ಕಾರಣ ಈ ನಾಲೆಗಳ ಮುಖಾಂತರ ರೈತರ ಹೊಲಗದ್ದೆಗಳಿಗೆ ನೀರು ಹರಿಸಲು ನೀರಾವರಿ ಇಲಾಖೆಗೆ ಯಾವುದೇ ಅಡ್ಡಿ ಆತಂಕಗಳಿಲ್ಲ. ಭತ್ತದ ನಾಟಿಗೂ ಮುನ್ನ ಸದರಿ ನಾಲೆಗಳ ಮುಖಾಂತರ ನೀರು ಹರಿಸಿದ ನೀರಾವರಿ ಇಲಾಖೆ ಈಗ ದಿಢೀರನೆ ಸದರಿ ನಾಲೆಗಳ ನೀರು ಬಂದ್ ಮಾಡಿದೆ. ಇದರಿಂದಾಗಿ ಬೆಳೆಯುವ ಹಂತದಲ್ಲಿದ್ದ ಭತ್ತದ ಬೆಳೆಗೆ ಸಂಕಷ್ಠ ಎದುರಾಗಿದೆ. ಸದರಿ ನಾಲೆಗಳ ವ್ಯಾಪ್ತಿಯಲ್ಲಿ ಬೆಳೆದು ನಿಂತಿರುವ ತೆಂಗು, ಅಡಿಕೆ ಮುಂತಾದ ವಾಣಿಜ್ಯ ಬೆಳೆಗಳು ಸಕಾಲದಲ್ಲಿ ನೀರು ಹರಿಯದಿದ್ದರೆ ಒಣಗುವ ಭೀತಿಗೆ ಸಿಲುಕಿವೆ.

ಮಳೆ ಅಭಾವದ ಕಾಲಘಟ್ಟದಲ್ಲಿ ನೀರಾವರಿ ಇಲಾಖೆ ಕಟ್ಟು ನೀರು ಪದ್ಧತಿಯಲ್ಲಿ ಸದರಿ ನಾಲೆಗಳ ಮುಖಾಂತರ ನೀರು ಹರಿಸುತ್ತಿತ್ತು. ನದಿಯಲ್ಲಿ ನೀರಿನ ಹರಿಯುವಿಕೆಯ ಪ್ರಮಾಣ ಕಡಿಮೆಯಾದರೆ ಗೊರೂರಿನ ಹೇಮಾವತಿ ಜಲಾಶಯದಿಂದ ಒಂದಷ್ಟು ಒಳಹರಿವಿನ ಪ್ರಮಾಣ ಹೆಚ್ಚಿಸಿ ರೈತರ ಬೆಳೆ ಸಂರಕ್ಷಣೆ ಮಾಡಲಾಗುತ್ತಿತ್ತು. ರೈತರ ಹಿತಾಸಕ್ತಿ ಮರೆತಿರುವ ನೀರಾವರಿ ಇಲಾಖೆಯ ಇಂಜಿನಿಯರುಗಳು ನದಿ ಕಾಲುವೆಯ ಮುಖಾಂತರ ರೈತರ ಜಮೀನುಗಳಿಗೆ ಹರಿಯಬೇಕಾಗಿದ್ದ ಹೇಮೆಯ ನೀರನ್ನು ಅಣೆಕಟ್ಟೆಗಳ ಕೆಳಭಾಗದಲ್ಲಿರುವ ವಿದ್ಯುತ್ ಉತ್ಪಾದಕ ಕಂಪನಿಗಳಿಗೆ ಹರಿಸಿ ರೈತರಿಗೆ ಮೋಸ ಮಾಡುತ್ತಿದ್ದಾರೆ. ನದಿ ಕಾಲುವೆಗಳ ಮುಖಾಂತರ ನೀರು ಹರಿಯುತ್ತಿದ್ದರೂ ನದಿಯಲ್ಲಿ ನೀರಿಲ್ಲ ಎಂದು ಸಬೂಬು ಹೇಳಿ ರೈತ ಸಮುದಾಯವನ್ನು ಯಾಮಾರಿಸುವ ಕೆಲಸವನ್ನು ನೀರಾವರಿ ಇಲಾಖೆ ಮಾಡುತ್ತಿದೆ.

ನೀರಾವರಿ ಇಲಾಖೆಯ ಅಧಿಕಾರಿಗಳ ನಿಲುವನ್ನು ಖಂಡಿಸಿರುವ ತಾಲೂಕು ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ಮಂದಗೆರೆ ಮತ್ತು ಹೇಮಗಿರಿ ನಾಲಾ ಬಯಲಿನಲ್ಲಿ ಬೆಳೆದು ನಿಂತಿರುವ ಬೆಳೆ ಸಂರಕ್ಷಣೆಗೆ ಅಧಿಕಾರಿಗಳು ಮೊದಲ ಆದ್ಯತೆ ನೀಡಬೇಕು. ಮಳೆಗಾಲದಲ್ಲಿ ಬರುವ ಹೆಚ್ಚುವರಿ ನೀರನ್ನು ಬಳಕೆ ಮಾಡಿ ವಿದ್ಯುತ್ ಕಂಪನಿಗಳು ವಿದ್ಯುತ್ ಉತ್ಪಾದನೆ ಮಾಡಬೇಕೆ ಹೊರತು ರೈತರ ನೀರನ್ನು ಕಸಿಯುವ ಹಕ್ಕು ಕಂಪನಿಗಳಿಗಿಲ್ಲ. ರೈತರ ಜಮೀನಿಗಳಿಗೆ ನೀರು ಬಿಡದೆ ತೊಂದರೆ ಕೊಡುತ್ತಿರುವ ಇಂಜಿನಿಯರುಗಳ ವಿರುದ್ಧ ರಾಜ್ಯ ಸರ್ಕಾರ ಶಿಸ್ತು ಕ್ರಮ ಜರುಗಿಸಬೇಕು. ನದಿ ಅಣೆಕಟ್ಟೆ ನಾಲೆಗಳ ವ್ಯಾಪ್ತಿಯಲ್ಲಿ ಬೆಳೆದು ನಿಂತಿರುವ ಬೆಳೆಗಳ ಸಂರಕ್ಷಣೆಗೆ ಮುಂದಾಗದಿದ್ದರೆ ರಾಜ್ಯ ರೈತ ಸಂಘ ನೀರಾವರಿ ಇಲಾಖೆಗೆ ಮುತ್ತಿಗೆ ಹಾಕಿ ಅಧಿಕಾರಿಗಳನ್ನು ದಿಗ್ಬಂಧನಕ್ಕೆ ಒಳಪಡಿಸುವುದಾಗಿ ಎಚ್ಚರಿಸಿದ್ದಾರೆ.

## ಫೋಟೋ ಸುದ್ದಿ



ಕೆ.ಆರ್.ನಗರ: ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಮತ್ತು ಮಾಜಿ ಸಚಿವ ಸಾ.ರಾ.ಮಹೇಶ್ ಅವರನ್ನು ಜೆಡಿಎಸ್ ಮುಖಂಡ ಎಲ್‌ಐಸಿ ನಿಂಗಪ್ಪ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಚಿಕ್ಕಮ್ಮನಿಂಗಪ್ಪ, ಯಶವಂತ, ಕಾರ್ತಿಕ್, ಪ್ರದೀಪ್, ದೇವೇಗೌಡ, ಗೋಪಾಲ, ಯೋಗೇಶ್ ಸೇರಿದಂತೆ ಹಲವರು ಇದ್ದರು.

# ವೈಚಾರಿಕತೆಯೇ ಮೈವೆತ್ತ ಶರಣೆ ಅಮ್ಮುಗೆ ರಾಯಮ್ಮ





| ವೀಣಾ ಹೇಮಂತ್‌ಗೌಡ ಪಾಟೀಲ್

ಉಪೇಕ್ಷಿತ ವಚನಕಾರರು

ಶರಣ ಚಳುವಳಿಯ ಅತ್ಯಂತ ದಿಟ್ಟ ಮಹಿಳೆ ಎಂದು ಹೆಸರಾದ ಅಮುಗೆ/ಅಮ್ಮುಗೆ ರಾಯಮ್ಮ ಕನ್ನಡ ನಾಡಿನ ಮಹಿಳಾ ವಚನಕಾರ್ತಿಯರಲ್ಲಿ ಪ್ರಮುಖರಾದವರು. ವೈಚಾರಿಕ ನಿಲುವು ಹಾಗೂ ಕೆಚ್ಚೆದೆಯ ಮಾತುಗಳಿಗೆ ಹೆಸರಾದ ಅಮ್ಮುಗೆ ರಾಯಮ್ಮ ಅವರು ಮೂಲತಃ ಈಗಿನ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಅಂದಿನ ಸೊನ್ನಲಿಗೆ ಗ್ರಾಮದಲ್ಲಿ ನೇಕಾರ ವೃತ್ತಿಯನ್ನು ಕೈಗೊಂಡ ಅಮುಗೆ ದೇವಯ್ಯನವರ ಪತ್ನಿ. ಈಕೆಯ ಮೊದಲ ಹೆಸರು ವರದಾನಿಯಮ್ಮ. ಪತಿಯೊಂದಿಗೆ ಆಕೆಯೂ ಕೂಡ ನೇಕಾರ ವೃತ್ತಿಯ ಹತ್ತು ಹಲವು ಕಾರ್ಯ ಚಟುವಟಿಕೆಗಳನ್ನು ತನ್ನ ಗೃಹಕೃತ್ಯದ ಜೊತೆಗೆ ಸಂಭಾಳಿಸುತ್ತಿದ್ದಳು. ದೂರದ ಕಲ್ಯಾಣದಲ್ಲಿ ಅಣ್ಣ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಕೀರ್ತಿ ಹಾಗೂ ಶರಣರ ವಿಚಾರಧಾರೆಗಳು ಅವರನ್ನು ಸೂಜಿಗಲ್ಲಿನಂತೆ ಆಕರ್ಷಿಸಿದವು. ಅಂತೆಯೇ ಆ ದಂಪತಿಗಳು ಮತ್ತೊಂದು ವಿಚಾರ ಮಾಡದೆ ಸೊನ್ನಲಿಗೆಯಿಂದ ಕಲ್ಯಾಣ ಕ್ಷೇತ್ರಕ್ಕೆ ಬಂದು ನೆಲೆಸಿದರು. ಅಲ್ಲಿಯೇ ತಮ್ಮ ನೇಯ್ಗೆಯ ವೃತ್ತಿಯನ್ನು ಆರಂಭಿಸಿದರು.

ಸತಿಪತಿಗಳೊಂದಾದ ಭಕ್ತಿಯು ಹಿತವಪ್ಪುದು ಶಿವಂಗೆ ಎಂಬ ಮಾತು ಅಮುಗೆ ರಾಯಮ್ಮ ಮತ್ತು ದೇವಯ್ಯನವರಿಗೆ ಅತ್ಯಂತ ಸೂಕ್ತವಾಗಿತ್ತು. ಕಲ್ಯಾಣಕ್ಕೆ ಬಂದ ನಂತರ ರಾಯಮ್ಮನವರು ಸಾಮಾನ್ಯ ಶರಣೆಯಾಗಲ್ಲದೇ ಅನುಭವ ಮಂಟಪದ ಘೋಷ್ಠಿಗಳಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸುವ, ತಮ್ಮ ವಿಚಾರ ವಿನಿಮಯ ಮಾಡಿಕೊಳ್ಳುವ ಸದಸ್ಯರಲ್ಲಿ ಒಬ್ಬರಾದರು. ತಮ್ಮ ಕಾಯಕ ನಿಷ್ಠೆಯ ಜೊತೆಗೆ ಪ್ರಖರ ವ್ಯಕ್ತಿತ್ವವನ್ನು ಹೊಂದಿದ್ದ ಅವರು ಅತ್ಯಂತ ಸೂಕ್ಷ್ಮ ವಿಚಾರಗಳನ್ನು ಕುರಿತು ದಿಟ್ಟ ನಿಲುವುಗಳನ್ನು ಹೊಂದಿದ್ದರು.

ಅತ್ಯಂತ ತಾರ್ಕಿಕವಾಗಿ ತಮ್ಮ ಅನುಭವದ ನುಡಿಗಳನ್ನು ಪ್ರಸ್ತುತಪಡಿಸುವ ಮೂಲಕ ಅಣ್ಣ ಬಸವಣ್ಣ, ಶೂನ್ಯ ಪೀಠ ಸಿಂಹಾಸನಾಧೀಶ ಅಲ್ಲಮಪ್ರಭುಗಳ ಮೆಚ್ಚುಗೆಯನ್ನು ಗಳಿಸಿದ್ದರು.

ಹಲವಾರು ವಚನಗಳನ್ನು ಬರೆದಿರುವ ಅಮುಗೆರಾಯಮ್ಮನವರು ತಮ್ಮ ವಚನಗಳಲ್ಲಿ ಯಾರನ್ನು ಮೆಚ್ಚಿಸುವ ಆಶಯವನ್ನು ಹೊಂದಿರಲಿಲ್ಲ ಬದಲಾಗಿ ಅವರ ವಚನಗಳಲ್ಲಿ ಜನರ ಮೂಢನಂಬಿಕೆಯ ಖಂಡನೆ, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಡಾಂಭಿಕತೆಯನ್ನು ಖಂಡಿಸುವ ದಿಟ್ಟತನವನ್ನು ನೋಡಬಹುದು. ಆಕೆಯ ವಚನಗಳ ಅಂಕಿತನಾಮ ಅಮುಗೇಶ್ವರ ಲಿಂಗ. ಗುರು,ಲಿಂಗ, ಪತಿ ಆಕೆಯ ಪಾಲಿಗೆ ಒಂದೇ ಆಗಿದ್ದ ಆಕೆಯ ವಚನಗಳಲ್ಲಿ ಆತ್ಮನಿರೀಕ್ಷಣೆಯನ್ನು ಕಾಣಬಹುದು.

ಕಾವಿ ಹೊದ್ದವರೆಲ್ಲರೂ ಸನ್ಯಾಸಿಗಳಲ್ಲ ಎಂದು ಅತ್ಯಂತ ತೀಕ್ಷ್ಣವಾಗಿ ಆಕೆ ಕಪಟವೇಷಧಾರಿಗಳನ್ನು ಕುರಿತು ವಿಮರ್ಶಾತ್ಮಕವಾಗಿ ಹೇಳಿದಳು. ಸಮಾಜದ ಓರೆ ಕೋರೆಗಳನ್ನು ನೇರವಾಗಿ ಹೇಳಿದ ಆಕೆ ತಿದ್ದಿಕೊಳ್ಳಲು ಜನರಿಗೆ ಸಲಹೆ ನೀಡಿದಳು.

ಅತ್ಯಂತ ನೇರ ಮತ್ತು ನಿಷ್ಟುರವಾದ ಭಾಷೆಯಲ್ಲಿ ಆಕೆ ವಚನಗಳನ್ನು ರಚಿಸಿದ್ದು ಆಕೆಯ ವಚನಗಳ ಸಂಖ್ಯೆ 116... ಜ್ಞಾನದ ಹಾದಿಯಲ್ಲಿ ಸ್ತ್ರೀ ಪುರುಷನಿಗಿಂತಲೂ ಮೇಲು ತುಸು ಮುಂದೆಯೇ ಸಾಗುತ್ತಾಳೆ ಎಂಬುದನ್ನು ಅಮುಗೆರಾಯಮ್ಮನವರ ವಚನಗಳನ್ನು ಓದಿದ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಪುರಾಣಗಳನ್ನು ಓದುವುದರಿಂದ ಜ್ಞಾನ ದೊರೆಯದು ಅದನ್ನು ಅನುಭವದಿಂದ ಗಳಿಸಬೇಕು ಎಂಬುದು ಆಕೆಯ ವಾದವಾಗಿತ್ತು. ಆಕೆಯ ದಿಟ್ಟ ವೈಚಾರಿಕತೆಗೆ ಶರಣು ಎಂದಿದ್ದ ಶರಣರು ಆಕೆಯನ್ನು ವಿಮರ್ಶಕಿ ಎಂದು ವ್ಯಾಖ್ಯಾನಿಸಿದ್ದರು.

ಎನ್ನ ಕಣ್ಣೊಳಗಿನ ಕಟ್ಟಿಗೆಯ ಮುರಿದವರಾರನೂ ಕಾಣೆ<br>
ಎನ್ನ ಕಾಲೊಳಗಿನ ಮುಳ್ಳ ತೆಗೆದವರಾರನೂ ಕಾಣೆ<br>
ಎನ್ನ ಅಂಗದಲ್ಲಿಪ್ಪ ಅಹಂಕಾರವ ಸುಡುವರಾರನೂ ಕಾಣೆ<br>
ಎನ್ನ ಮನದಲಿಪ್ಪ ಮಾಯ ಪ್ರಪಂಚವ ಕೆಡಿಸುವರಾ ರನೂ ಕಾಣೆನಯ್ಯ<br>
ಆದ್ಯರ ವೇದ್ಯರ ವಚನಗಳಿಂದ ಅರಿದೆವೆಂಬವರು ಅರಿಯಲಾರರು ನೋಡಾ<br>
ಎನ್ನ ಕಣ್ಣೊಳಗಿನ ಕಟ್ಟಿಗೆಯ ನಾನೇ ಮುರಿಯಬೇಕು<br>
ಎನ್ನ ಕಾಲೊಳಗಿನ ಮುಳ್ಳ ನಾನೇ ತೆಗೆಯಬೇಕು<br>
ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೇ ಸುಡಬೇಕು<br>
ಎನ್ನ ಮನದಲ್ಲಿಪ್ಪ ಮಾಯ ಪ್ರಪಂಚವ ನಾನೇ ಕಳೆಯಬೇಕು<br>
ಅಮುಗೇಶ್ವರ ಲಿಂಗವ ನಾನೇ ಅರಿಯಬೇಕು

ನಮ್ಮ ಮನದಲ್ಲಿರುವ ಮಾಯಾ ಪ್ರಪಂಚದ ತಪ್ಪುಗಳಿಗೆ ನಾವೇ ಭಾಧ್ಯಸ್ತರು ಆದ್ದರಿಂದ ನಮ್ಮ ಆಂತರಂಗಿಕ ಹಾಗೂ ಬಹಿರಂಗಿಕ ತಪ್ಪು ನಡಾವಳಿಗಳನ್ನು ನಾವೇ ತಿದ್ದಿಕೊಳ್ಳಬೇಕು ಎಂದು ಅಮುಗೆ ರಾಯಮ್ಮನವರು ಹೇಳುತ್ತಾರೆ.

**ಜ್ಞಾನವೆಂಬುದು ಬೀದಿಯ ಪಸರವೇ ?**<br>
**ಬೊಕ್ಕಣ್ಣಕ್ಕೆ ತುಂಬುವ ಹುರುಳಿಯೇ ?**<br>
**ಚೀಲದೊಳಗಣ ಜೀರಿಗೆಯೇ ?**<br>
**ಗಾಣದೊಳಗಣ ಹಿಂಡಿಯೇ ?**<br>
**ಜ್ಞಾನವೆಂಬುದ ಎಲ್ಲರೊಡನೆ ಬೀರದಿರಬೇಕು**<br>
**ಗೆಲ್ಲ ಸೋಲಿನ ಮಾತು ಬಂದಡೆ ಗೆಲ್ಲವ ನುಡಿಯದಿರಬೇಕು**<br>
**ಅಮುಗೇಶ್ವರ ಲಿಂಗವೆಂಬನು**

ಜ್ಞಾನ ಎಂಬುದು ಮಾರಾಟಕ್ಕಾಗಲಿ ಪ್ರದರ್ಶನಕ್ಕಿಡುವ ವಸ್ತುವಲ್ಲ... ಜ್ಞಾನಕ್ಕೆ ತನ್ನದೇ ಆದ ತೂಕವಿದ್ದು ಅದನ್ನು ಅರಿವಿಲ್ಲದವರ ಮುಂದೆ ಹೇಳಬಾರದು. ವಾದ ವಿವಾದದ ಸಮಯದಲ್ಲಿ ಜ್ಞಾನದ ಮಾತುಗಳನ್ನು ಹೇಳಿದಾಗ ಅವರಿಗೆ ಅರ್ಥವಾಗುವುದಿಲ್ಲ.. ಅಂತಹ ಸೋಲು ಗೆಲುವಿನ ಸಂದರ್ಭದಲ್ಲಿ ಗೆಲ್ಲಬೇಕು ಎಂಬ ಹಠದಿಂದ ಮಾತನಾಡಬಾರದು ಎಂದು ಆಕೆ ಹೇಳುತ್ತಾರೆ. ಅಹಂಕಾರದಿಂದ ಮಾತುಗಳಲ್ಲಿ ಗೆಲ್ಲದೆ ಮೌನವಾಗಿರುವುದು ಜ್ಞಾನಿಯ ಲಕ್ಷಣ ಎಂದು ಆಕೆ ತನ್ನ ಅಭಿಪ್ರಾಯವನ್ನು ವಚನಗಳ ಮೂಲಕ ವ್ಯಕ್ತಪಡಿಸುತ್ತಾರೆ

ಶೂದ್ರ ಕುಲದಲ್ಲಿ ಜನಿಸಿದರು ಕೂಡ ತಮ್ಮ ವೈಚಾರಿಕ ಚಿಂತನೆಗಳ ಕಾರಣದಿಂದ ಅಮುಗೆ ರಾಯಮ್ಮ ಅಂದಿನ ಕಾಲದ ಮಹಿಳಾ ಸಬಲೀಕರಣದ ಸಂಕೇತವಾಗಿದ್ದರು. ಅಂದಿನ ಕಾಲದ ಮಹಿಳೆಯರಿಗೆ ಆತ್ಮವಿಶ್ವಾಸ ಮತ್ತು ವೈಚಾರಿಕತೆಯ ಬಲವನ್ನು ತುಂಬುವ ನಿಟ್ಟಿನಲ್ಲಿ ಅಮುಗೆರಾಯಮ್ಮನವರ ವಚನಗಳು ಸಾಮಾಜಿಕ ಗೌರವಕ್ಕೆ ಪಾತ್ರವಾಗಿದ್ದವು.

ಕಲ್ಯಾಣ ಕ್ರಾಂತಿಯ ನಂತರ ಅಮುಗೆ ರಾಯಮ್ಮ ಮತ್ತು ದೇವಯ್ಯ ದಂಪತಿಗಳು ವಚನಗಳ ಕಟ್ಟನ್ನು ಹೊತ್ತು ತಮ್ಮ ಮೂಲ ಊರಾದ ಸೊನ್ನಲಿಗೆಯ ಬಳಿಯ ಪುದುಚೆಗೆ ಬಂದು ಅಲ್ಲಿಯೇ ನೆಲೆಸಿದರು. ಶರಣರ ವಚನಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ತಮ್ಮ ಮುಂದಿನ ಬದುಕನ್ನು ಮುಡುಪಾಗಿಟ್ಟರು.

ದಿಟ್ಟ ನೇರ ನಿಷ್ಟುರ ವಚನಕಾರ್ತಿ ಅಮುಗೆ ರಾಯಮ್ಮನಿಗೆ ಶರಣು ಶರಣಾರ್ಥಿ.

# ಬೂದಿಯಿಂದೇಳುವ ಫೀನಿಕ್ಸ್ ಛಲ!



| ರೂಪ ಮಂಜುನಾಥ ಹೊಳೆನರಸೀಪುರ

ಯಾರ ಜೀವನದಲ್ಲಿಯೂ ಕಷ್ಟ, ಸಂಕಟ, ಸೋಲು ತಪ್ಪಿದ್ದಲ್ಲ. ರಾಜನಿರಲಿ, ರೈತನಿರಲಿ, ವಿದ್ಯಾವಂತನಿರಲಿ, ಅಜ್ಞಾನಿಯಿರಲಿ ? ಬದುಕು ಬಹುಪಾಲು ಎಲ್ಲರನ್ನೂ ಒಮ್ಮೆ ಸೊಂಟ ಮುರಿಯುವಷ್ಟು ಬೆಂಡೆತ್ತಿ ನೆಲಕ್ಕೆ ಒಗೆದೇ ಬಿಡುತ್ತದೆ. ಕೆಲವರು ಆ ನೋವೇ ತಮ್ಮ ಕೊನೆ ಎಂದು ತಿಳಿದು, ಹಾಗೇ ದಿನ ಕಳೆಯುತ್ತಾ ಮಣ್ಣಾಗುತ್ತಾರೆ. ಇನ್ನು ಕೆಲವರು ಅದೇ ಬೂದಿಯಿಂದ ಕೊಡವಿಕೊಂಡು ಮೇಲೆದ್ದು ಬಾನನ್ನೇ ಮುಟ್ಟುವಂಥಾ ಮಟ್ಟದ ಸಾಧನೆ ಮಾಡುತ್ತಾರೆ . ಈ ಎದೆಯುಬ್ಬಿಸುವಂತೆ ಬೆಳೆಯುವ ಎರಡನೇ ದಾರಿಯ ಸಂಕೇತವಾಗಿ ಜಗತ್ತಿನ ಎಲ್ಲ ಸಂಸ್ಕೃತಿಗಳು ಒಂದೇ ಪಕ್ಷಿಯನ್ನು ಆರಿಸಿಕೊಂಡಿವೆ ? ಫೀನಿಕ್ಸ್! ಸಂಘರ್ಷಗಳು ಹೊಸದೊಂದು ಆರಂಭದ ಮುನ್ನುಡಿ ಎಂಬ ಸತ್ಯವನ್ನು ನಮಗೆ ನೆನಪಿಸುವುದು ಗ್ರೀಕ್ ಪುರಾಣದ ಅದ್ಭುತ ಸೃಷ್ಟಿ 'ಫೀನಿಕ್ಸ್' (ಞುಂಜಟಿಥ) ಪಕ್ಷಿ. ನೂರು ಕಾಲ ಬಾಳಿ, ಕೊನೆಗೆ ತನ್ನನ್ನೇ ತಾನು ಸುಟ್ಟುಕೊಂಡು ಬೂದಿಯಾಗಿ, ಅದೇ ಬೂದಿಯಿಂದ ಮತ್ತೆ ನವಚೈತನ್ಯದೊಂದಿಗೆ ಹಾರಿ ಬರುವ ಈ ಪಕ್ಷಿ ಮಾನವ ಕುಲಕ್ಕೆ ದೊಡ್ಡ ಸಂದೇಶವನ್ನೇ ನೀಡುತ್ತದೆ.

ಪುರಾಣಗಳ ಪ್ರಕಾರ, ಫೀನಿಕ್ಸ್ ಪಕ್ಷಿಯು ಕೆಂಪು ಮತ್ತು ಬಂಗಾರದ ಬಣ್ಣದ ರೆಕ್ಕೆಗಳನ್ನು ಹೊಂದಿರುವ ಅತ್ಯಂತ ಆಕರ್ಷಕ ಹಕ್ಕಿ. ಇದರ ಪ್ರಮುಖ ಗುಣಲಕ್ಷಣಗಳೆಂದರೆ:

ಪುನರ್ಜನ್ಮ: ತನ್ನ ಅಂತಿಮ ಕ್ಷಣದಲ್ಲಿ ಬೆಂಕಿಯ ಜ್ವಾಲೆಯಲ್ಲಿ ಲೀನವಾಗಿ, ಮತ್ತೆ ಅದೇ ಬೂದಿಯಿಂದ ಮರಿ ಹಕ್ಕಿಯಾಗಿ ಹುಟ್ಟುವುದು.

**ಅಕ್ಷಯ ಶಕ್ತಿ:** ಇದು ಎಂದಿಗೂ ಸಂಪೂರ್ಣವಾಗಿ ಅಳಿಯುವುದಿಲ್ಲ. ತನ್ನ ಸಾವನ್ನೇ ತನ್ನ ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳುತ್ತದೆ.

**ಸಹನೆ ಮತ್ತು ಸ್ಥಿತಪ್ರಜ್ಞೆ:** ಸುಡುವ ನೋವನ್ನು ಸಹಿಸಿಕೊಂಡು ಹೊಸ ರೂಪ ಪಡೆಯುವ ಶಕ್ತಿ ಇದಕ್ಕಿದೆ.

ಫೀನಿಕ್ಸ್ ಪಕ್ಷಿಯ ಜೀವನ ಚಕ್ರವನ್ನು ನಮ್ಮ ಬದುಕಿನ ಏರಿಳಿತಗಳಿಗೆ ಹೋಲಿಸಬಹುದು.

**ಸಂಕಷ್ಟದ ಜ್ವಾಲೆ:** ನಮಗೆ ಎದುರಾಗುವ ಹಣಕಾಸಿನ ತೊಂದರೆ, ಅನಾರೋಗ್ಯ ಅಥವಾ ಮಾನಸಿಕ ನೋವುಗಳು ನಮ್ಮನ್ನು ಸುಡುವ 'ಜ್ವಾಲೆ'ಯಂತೆ. ಆದರೆ ಆ ಜ್ವಾಲೆ ನಮ್ಮನ್ನು ನಾಶಪಡಿಸಲಿಕ್ಕಲ್ಲ, ಬದಲಾಗಿ ನಮ್ಮಲ್ಲಿರುವ ಕಲ್ಮಶಗಳನ್ನು ಸುಟ್ಟು ಶುದ್ಧಗೊಳಿಸಲು ಎನ್ನುವುದನ್ನು ಮರೆಯಬಾರದು.

**ಶೂನ್ಯದಿಂದ ಆರಂಭ:** ಒಮ್ಮೊಮ್ಮೆ ಜೀವನದಲ್ಲಿ ಎಲ್ಲವನ್ನೂ ಕಳೆದುಕೊಂಡು ಬರಿಗೈಲಿ ನಿಂತಾಗ, ಅದು ಬೂದಿಯಾದ ಫೀನಿಕ್ಸ್‌ನ ಸ್ಥಿತಿಯಂತೆ. ಅಲ್ಲಿಂದ ಮತ್ತೆ ಮೇಲೆದ್ದಾಗ ಮಾತ್ರ ನಮ್ಮ ನಿಜವಾದ ಸಾಮರ್ಥ್ಯ ಜಗತ್ತಿಗೆ ತಿಳಿಯುತ್ತದೆ.

**ಅನುಭವದ ರೆಕ್ಕೆಗಳು:** ಹಳೆಯ ತಪ್ಪುಗಳಿಂದ ಪಾಠ ಕಲಿತು ಮೇಲೆದ್ದವನು ಮೊದಲಿನವನಿಗಿಂತ ಹೆಚ್ಚು ಜ್ಞಾನಿ ಮತ್ತು ಬಲಶಾಲಿಯಾಗಿರುತ್ತಾನೆ.

ಗ್ರೀಕ್ ಪುರಾಣದ ಪ್ರಕಾರ ಫೀನಿಕ್ಸ್ 500 ರಿಂದ 1460 ವರ್ಷಗಳವರೆಗೂ ಜೀವಿಸುತ್ತದೆ. ಲೋಕದಲ್ಲಿ ಒಂದು ಸಮಯದಲ್ಲಿ ಒಂದೇ ಒಂದು ಫೀನಿಕ್ಸ್ ಜೀವಂತವಾಗಿರುತ್ತದೆ ಎಂದು ನಂಬಲಾಗುತ್ತದೆ. ಅದು ತನ್ನ ಇಡೀ ಜೀವಿತಾವಧಿಯಲ್ಲಿ ಏಕಾಂಗಿಯಾಗಿರುತ್ತದೆ.ಇದಕ್ಕೆ ಸಾಧಾರಣ ಪಕ್ಷಿಗಳಂತೆ ಸಂತಾನೋತ್ಪತ್ತಿ ಇರುವುದಿಲ್ಲ. ಅಂದರೆ, ಮೊಟ್ಟೆಯಿಟ್ಟು ಮರಿ ಮಾಡುವ ಕ್ರಮ ಇದಕ್ಕಿಲ್ಲ. ಬದಲಾಗಿ, ಅದು ವೃದ್ಧಾಪ್ಯಕ್ಕೆ ಬಂದಾಗ ಅಥವಾ ಸಾಯುವ ಸಮಯ ಹತ್ತಿರವಾದಾಗ ತಾನೇ ಚಿತೆಯನ್ನು ನಿರ್ಮಿಸಿಕೊಂಡು ಸುಟ್ಟು ಬೂದಿಯಾಗುತ್ತದೆ. ಜೀವನ ಮುಗಿಯುವ ಮೊದಲು ಅದು ಸುಗಂಧ ದ್ರವ್ಯಗಳ ಮರದ ಕಟ್ಟಿಗೆಗಳಿಂದ ಗೂಡು ಕಟ್ಟಿ ತಾನೇ ಅದಕ್ಕೆ ಬೆಂಕಿ ಹಚ್ಚಿಕೊಂಡು ಜ್ವಾಲೆಯಲ್ಲಿ ಸಮಾಧಿಯಾಗುತ್ತದೆ. ಆ ಬೂದಿಯಿಂದಲೇ ಅದೇ ಫೀನಿಕ್ಸ್ ಮತ್ತೆ ಮರುಹುಟ್ಟನ್ನು ಹೆಚ್ಚು ತಾರುಣ್ಯ,ಬಲಿಷ್ಠ, ಪ್ರಕಾಶಮಾನವಾಗಿ ಪಡೆಯುತ್ತದೆ.



ಈ ಹಕ್ಕಿಯು ಕೇವಲ ಒಂದು ಸಂಸ್ಕೃತಿಯ ಕಥೆಯಲ್ಲ. ಗ್ರೀಕರು ಇದನ್ನು ಫೀನಿಕ್ಸ್ ಎಂದು ಕರೆದರು. ಅದೇ ಪಕ್ಷಿ ಈಜಿಪ್ಷಿಯನ್ ಪುರಾಣದಲ್ಲಿ ?ಬೆನ್ನು?, ಅಮೆರಿಕ ಮೂಲನಿವಾಸಿ ಪುರಾಣದಲ್ಲಿ ?ಥಂಡರ್‌ಬರ್ಡ್?, ರಷ್ಯಾದ ಕಥೆಗಳಲ್ಲಿ ?ಅಗ್ನಿ ಪಕ್ಷಿ?, ಚೀನಾದಲ್ಲಿ ?ಫೆಂಗ್ ಹ್ವಾಂಗ್?, ಜಪಾನ್‌ನಲ್ಲಿ ?ಹೋ–ಒ? ಎಂಬ ಹೆಸರು ಪಡೆದಿದೆ. ಭಾರತದ ಪುರಾಣದ ಗರುಡ ಕೂಡ ಈ ಸಂಪ್ರದಾಯದ ಒಂದು ರೂಪ. ಎಲ್ಲ ದೇಶಗಳೂ, ಎಲ್ಲ ಭಾಷೆಗಳೂ, ಎಲ್ಲ ಕಾಲಗಳಲ್ಲಿಯೂ ? ಈ ಒಂದು ಸಂದೇಶವನ್ನು ಒಂದೇ ರೀತಿ ಹೇಳುತ್ತದೆ: ಬಿದ್ದ ಮೇಲೆ ಮೇಲೇಳಬಹುದು, ಮೇಲೇಳಲೇ ಬೇಕು!



ಯಹೂದಿ ಪರಂಪರೆಯ ಅದ್ಭುತ ಕಥೆ

ಯಹೂದಿ ಪರಂಪರೆಯ ಪ್ರಕಾರ, ?ಏಡನ್? ತೋಟದಲ್ಲಿ ?ಈವ್? ಎಲ್ಲ ಪ್ರಾಣಿಗಳಿಗೂ ನಿಷಿದ್ಧವಾದ ಹಣ್ಣುಗಳನ್ನು ತಿನ್ನಲು ಪ್ರಚೋದಿಸಿದಾಗ, ಫೀನಿಕ್ಸ್ ಮಾತ್ರವೇ ತಿನ್ನಲು ನಿರಾಕರಿಸಿತು. ಆ ನಿಷ್ಠೆಗೆ ಬಹುಮಾನವಾಗಿ ದೇವರು ಅದಕ್ಕೆ ಸಾವಿಲ್ಲದ ಜೀವ ಅನುಗ್ರಹಿಸಿದ. ಆಮಿಷಕ್ಕೆ ಮಣಿಯದಿರುವ ನಿಷ್ಠೆಯು ಅಮರತ್ವವನ್ನು ತರುತ್ತದೆ! ಇದು ಆ ಕಥೆಯ ಸಂದೇಶ.

ಫೀನಿಕ್ಸ್ ಪಕ್ಷಿಗೆ ಅದ್ಭುತ ಗುಣಗಳಿವೆ. ಅಮರತ್ವ, ಗಾಯ ಗುಣಪಡಿಸಿಕೊಳ್ಳುವ ಶಕ್ತಿ, ಅಗ್ನಿ ನಿಯಂತ್ರಣ, ಅಪಾರ ಜ್ಞಾನ ? ಇವೆಲ್ಲ ಅದರ ವಿಶೇಷಗಳು. ಅನೇಕ ಕಥೆಗಳಲ್ಲಿ ಫೀನಿಕ್ಸ್‌ನ ಕಣ್ಣೀರು ಮತ್ತು ಅದರ ರೆಕ್ಕೆಗಳು ರೋಗ ಗುಣಪಡಿಸುವ ಸಾಮರ್ಥ್ಯ ಹೊಂದಿವೆ ಎಂದು ಹೇಳುತ್ತವೆ. ಮುಖ್ಯವಾಗಿ ಅದು ಸ್ವತಃ ಸಾವನ್ನು ಆರಿಸಿಕೊಳ್ಳುತ್ತದೆ, ಸಾಯಲು ಹೆದರುವುದಿಲ್ಲ, ಏಕೆಂದರೆ ಸಾವು ಅಂತ್ಯ ಅಲ್ಲ ಎಂದು ಅದಕ್ಕೆ ಗೊತ್ತಿದೆ.

ಫೀನಿಕ್ಸ್ ವಿಚಾರವಾಗಿ ಇಷ್ಟೊಂದು ಪೀಠಿಕೆ ಪುರಾಣ ಬರೆಯಲು ಕಾರಣವಿದೆ ಕಣ್ರೀ. ಅಮೆರಿಕದಲ್ಲಿ ನನ್ನ ಮಗನಿರುವ ರಾಜ್ಯ ಅರಿಜ಼ೋನ. ಅದರ ರಾಜಧಾನಿ ಫೀನಿಕ್ಸ್. ನಾನು ತಾಯ್ನಾಡಿಂದ ಬರುವಾಗ, ಹೋಗುವಾಗ,ವಿಮಾನ ಹತ್ತಲು, ಇಳಿಯಲು ಇಲ್ಲಿಗೇ ಬರಬೇಕು.ಬಂದೋಗುವಾಗಲೆಲ್ಲಾ,?ಈ ಊರಿಗೆ ಫೀನಿಕ್ಸ್, ಅನ್ನೋ ಹೆಸರು ಯಾಕೆ ಬಂತೂ??, ಎನ್ನುವ ಪ್ರಶ್ನೆ ಸದಾ ಕಾಡುತ್ತಿದ್ರೂ, ಅದಕ್ಕೆ ಉತ್ತರ ಕಂಡುಕೊಳ್ಳೋಕೆ ಇಷ್ಟು ವರ್ಷ ಬೇಕಾಯ್ತು. ಆ ಮಟ್ಟಿಗಿನ ಸೋಂಬೇರಿಯೋ,?. ಇಲ್ಲ ಅರವತ್ತು ಸಮೀಪವಾಯ್ತಲ್ಲಾ, ಮರೆವೋ, ಅರಳು ಮರಳೂ ಇದ್ದಿರಬಹುದು.ಒಟ್ನಲ್ಲಿ ಏನೇ ಕೆಲಸ ಆಗಬೇಕಾದ್ರೂ ಸಮಯ ಕೂಡಿ ಬರಬೇಕು. ಅಥವಾ ಆ ಮೇಲಿರೋನು ಮಾಡಿಸಬೇಕು. ನಾವು ಮಾಡಬೇಕು. ಅಲ್ವಾ? ಈ ಉತ್ತರಗಳೇ ಕೆಲವೊಮ್ಮೆ ಬಲು ಸುಲಭ. ವಿಷಯ ವಿಷಯಾಂತರ ಆಗೋ ಮುಂಚೆ ಮತ್ತೆ ಫೀನಿಕ್ಸ್ ಪುರಾಣಕ್ಕೇ ಬರೋಣ!

**ಅಮೆರಿಕದ ಫೀನಿಕ್ಸ್ ನಗರ**

ಅಮೆರಿಕದ ಅರಿಜೋನಾ ರಾಜ್ಯದ ರಾಜಧಾನಿ ಫೀನಿಕ್ಸ್ ನಗರಕ್ಕೆ ಈ ಹೆಸರು ಬಂದ ಕಥೆ ನಿಜಕ್ಕೂ ಭಾವಸ್ಪರ್ಶಿಯಾದದ್ದು. ಸಾವಿರ ವರ್ಷಗಳ ಹಿಂದೆ ಹೊಹೊಕಾಮ್ ಎಂಬ ಆದಿವಾಸಿ ಜನಾಂಗ ಅಲ್ಲಿ 135 ಮೈಲಿ ಉದ್ದದ ಅಣೆಕಟ್ಟು ಕಾಲುವೆ ವ್ಯವಸ್ಥೆ ನಿರ್ಮಿಸಿ ಮರಳುಭೂಮಿಯನ್ನು ಹಸಿರು ಮಾಡಿದ್ದರು. ನಂತರ ವರ್ಷಗಳು ಕಳೆದಂತೆ ಆ ಜನಾಂಗ ನಿಗೂಢವಾಗಿ ಮಾಯವಾಯಿತು. ನಂತರ 1860ರ ದಶಕದಲ್ಲಿ ಅಲ್ಲಿಗೆ ಬಂದ ಹೊಸಬರು, ಹಳೆಯ ನಾಗರಿಕತೆಯ ಅದೇ ಅವಶೇಷಗಳ ಮೇಲೆ ಹೊಸ ನಗರವನ್ನು ಕಟ್ಟಲು ನಿರ್ಧರಿಸಿದರು 1870 ರಲ್ಲಿ ಆ ನಾಡಿಗೆ ಬಂದ ಡ್ಯಾರೆಲ್ ಡಪ್ಪಾ ಎಂಬ ಇಂಗ್ಲಿಷ್ ವಿದ್ಯಾವಂತ ಹೊಸ ನಗರಕ್ಕೆ ?ಫೀನಿಕ್ಸ್? ಎಂಬ ಹೆಸರು ಸೂಚಿಸಿದ. ಅವನ ತರ್ಕ ಹೀಗಿತ್ತು: ಒಂದು ನಾಗರಿಕತೆಯ ಬೂದಿಯ ಮೇಲೆ ಹೊಸ ನಾಗರಿಕತೆ ಎದ್ದು ನಿಲ್ಲುತ್ತದೆ ? ಇದು ಫೀನಿಕ್ಸ್ ಪಕ್ಷಿಯ ಪ್ರತೀಕ. ಆ ಊಹೆ ನಿಜವಾಯಿತು. ಇಂದು ಫೀನಿಕ್ಸ್ ಅಮೆರಿಕದ ಐದನೇ ಅತಿ ದೊಡ್ಡ ಜನಸಂಖ್ಯೆ ಹೊಂದಿರುವ ನಗರವಾಗಿ ಬೆಳೆದು ನಿಂತಿದೆ.

ಪ್ರತಿ ಬಾರಿ ಫೀನಿಕ್ಸ್ ನೆಲದ ಮೇಲೆ ಹೆಜ್ಜೆ ಇಟ್ಟಾಗಲೂ, ಈ ಜೀವನದ ಸಮರದಲ್ಲಿ ಕಷ್ಟಗಳು, ಸವಾಲುಗಳು, ನೋವುಗಳು, ಸೋಲುಗಳೆಂಬ ಎಷ್ಟೋ ವೈರಿಗಳು ನನ್ನನ್ನ ಹೊಡೆದು, ಬಡಿದು ಮಕಾಡೆ ಮಲಗಿಸಿದರೂ, ಮತ್ತೆ ಕೊಡವಿ ಮೇಲೇಳಲು ಪ್ರೇರೇಪಿಸುತ್ತದೆ. ಇದು ಫೀನಿಕ್ಸ್ ನೆಲದ ಮಹಿಮೆಯೋ, ಆ ಹೆಸರಿನ ತಾಕತ್ತೋ, ಇಲ್ಲಾ ನನ್ನ ಮನಸ್ಸಿನಲ್ಲಾಗುವ ಬದಲಾವಣೆಯೋ ತಿಳೀದು ಕಣ್ರೀ. ಒಟ್ಟಿನಲ್ಲಿ ನಾವು ಫೀನಿಕ್ಸ್ ಪಕ್ಷಿಯ ಗುಣಗಳನ್ನ ಧರಿಸಿದಷ್ಟೂ,?ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ, ಜಗ್ಗದೆಯೆ, ಕುಗ್ಗದೆಯೆ ನುಗ್ಗಿ ನಡೆ ಮುಂದೆ?, ಎಂಬ ಸಾಲುಗಳು ನಮ್ಮ ಮುಂದಿನ ಪಯಣಕ್ಕಾಗಲಿ ಅಥವಾ ದಿನನಿತ್ಯದ ಸವಾಲುಗಳಿಗಾಗಲಿ, ಸದಾ ಸ್ಫೂರ್ತಿದಾಯಕವಾಗಿ ಉತ್ಸಾಹ ಮತ್ತು ಧೈರ್ಯವನ್ನು ತುಂಬುವ ಅತ್ಯಂತ ಜನಪ್ರಿಯ ಕವಿತೆಯಾಗಿದೆ. ಇದನ್ನು ಬರೆದ ಕವಿ ಜಿ ಪಿ ರಾಜರತ್ನಮ್ ಅವರಿಗೆ ವಂದಿಸುತ್ತಾ, ಜಗ್ಗದೆಯೆ ಕುಗ್ಗದೆಯೆ ಮುಂದಕ್ಕೆ ನಡೆಯುತ್ತಾ ವೈರಿಗಳನ್ನು ಎದುರಿಸುವುದೇ ಜೀವನ ಸಂಗ್ರಾಮದ ಸಾರವಲ್ವೇ?

ಜೀವನವೆಂಬುದು ಹೂವಿನ ಹಾಸಿಗೆಯಲ್ಲ, ಅದು ಕಲ್ಲು ಮುಳ್ಳಿನ ಹಾದಿ. ಆದರೆ ಪ್ರತಿಯೊಂದು ಕತ್ತಲೆಯ ನಂತರ ಬೆಳಗು ಇರುತ್ತದೆ ಎಂಬುದು ಪ್ರಕೃತಿಯ ನಿಯಮ. ಫೀನಿಕ್ಸ್ ಹಕ್ಕಿಯಂತೆ ನಾವೂ ಕೂಡ ಸೋಲಿಗೆ ಹೆದರದೆ, ಬಿದ್ದ ಕಡೆಯಿಂದಲೇ ಎದ್ದು ನಿಂತು ರೆಕ್ಕೆ ಬಿಚ್ಚಿ ಹಾರಬೇಕಿದೆ. ಆಗ ಮಾತ್ರ ಬದುಕಿನ ಸಮರದಲ್ಲಿ ವಿಜಯ ಮಾಲೆ ನಮ್ಮದಾಗುತ್ತದೆ.ವಂದನೆಗಳು.

# ಸಂತ ಜೋಸೆಫರ ಕಾಲೇಜಿನಲ್ಲಿ 13ನೇ ಪದವಿ ಪ್ರಧಾನ

**ಮೈಸೂರು:** ಮೈಸೂರು ಡಯೋಸಿಷನ್ ಎಜುಕೇಷನಲ್ ಸೊಸೈಟಿಯ ಅಂಗ ಸಂಸ್ಥೆಯಾದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಲ್ಲಿ 13ನೇ ಪದವಿ ಪ್ರಧಾನ ಸಮಾರಂಭ ಕಾಲೇಜಿನ ಆವರಣದಲ್ಲಿ ಸಂಭ್ರಮದಿಂದ ಆಯೋಜಿಸಲಾಯಿತು.

ಮೈಸೂರು ಡಯೋಸಿಷನ್ ಎಜುಕೇಷನಲ್ ಸೊಸೈಟಿಯ ಅಧ್ಯಕ್ಷ ಹಾಗೂ ಮೈಸೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ಡಾ.ಎಸ್.ಜೆ.ಫ್ರಾನ್ಸಿಸ್ ಸೆರಾವೊ ಕಾರ್ಯಕ್ರಮದ ಅಧ್ಯಕ್ಷೀಯ ಭಾಷಣದಲ್ಲಿ ನಮ್ಮ ಕಾಲೇಜು ಕೇವಲ ಶೈಕ್ಷಣಿಕ ಸಾಧಕರನ್ನು ಮಾತ್ರವಲ್ಲದೆ, ಮಾನಸಿಕವಾಗಿ ಸಮತೋಲನ ಮತ್ತು ಬೌದ್ಧಿಕವಾಗಿ ಸೃಜನಶೀಲರಾದ ಪದವೀಧರರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಿದೆ. ಜೀವನದಲ್ಲಿ ಸಾಧಿಸಬೇಕಾದ ನಿರ್ದಿಷ್ಟ ಗುರಿಗಳತ್ತ ಗಮನಹರಿಸುವ ಮಹತ್ವವನ್ನು ಸ್ಪಷ್ಟಪಡಿಸಿದರು. ವಿದ್ಯಾರ್ಥಿಗಳು ಕೇವಲ ಅಧಿಕಾರ ಮತ್ತು ಕ್ಷಣಿಕ ಸುಖದ ಹಿಂದೆ ಹೋಗದೆ. ಪರಿಪೂರ್ಣ ಜೀವನವನ್ನು ರೂಪಿಸಿಕೊಳ್ಳುವತ್ತ ಗಮನಹರಿಸಬೆಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಬಿ.ಐ.ಎಂ.ಎಸ್ ನ ನಿವೃತ್ತ ಪ್ರಾಧ್ಯಾಪಕ ಡಾ.ಡಿ.ಆನಂದ್ ಮಾತನಾಡಿ, ಪದವಿ ಪಡೆದ ನಂತರ ಯುವಕರು ಸಾಮಾಜಿಕ – ನಾಗರೀಕ ಜವಾಬ್ದಾರಿಗಳನ್ನು ಸ್ವೀಕರಿಸಲು ಸಿದ್ಧರಿರಬೇಕು. ದೇಶದ ಭವಿಷ್ಯವು ಯುವಕರ ಮೇಲೆ ಅವಲಂಬಿತವಾಗಿದ್ದು, ಯುವಕರನ್ನು ಸಮಾಜವು ಮುಕ್ತ ಕಣ್ಣುಗಳಿಂದ ನೋಡುತ್ತಿರುತ್ತದೆ. ಹಾಗಾಗಿ ನೀವು ಎಚ್ಚರದಿಂದಿರಬೇಕೆಂದು ಹೇಳಿದರು.



ಎಂ.ಡಿ.ಇ.ಎಸ್‌ನ ಕಾರ್ಯದರ್ಶಿ ಎಡ್ವರ್ಡ್ ವಿಲಿಯಂ ಸಲ್ಡಾನ್ಹಾ, ಖಜಾಂಚಿ ನವೀನ್ ಕುಮಾರ್, ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥೆ ಎನ್.ಚಂದ್ರಕಲಾ ಇನ್ನಿತರರು ಉಪಸ್ಥಿತರಿದ್ದರು.

28 ಅತ್ಯುತ್ತಮ ವಿದ್ಯಾರ್ಥಿಗಳನ್ನು ವಿವಿಧ ವಿಭಾಗಗಳ ಹಿನ್ನೆಲೆಯಲ್ಲಿ ಗೌರವಿಸಲಾಯಿತು. ಶೈಕ್ಷಣಿಕ ಉತ್ಕೃಷ್ಟತೆಗಾಗಿ ಪ್ರೊ.ಮಣಿ ಸಿ.ಮ್ಯಾಥ್ಯೂ, ಎಂ.ಪಲ್ಲವಿ, ವೈ.ಎಸ್. ಮೋಕ್ಷಾ, ಕೆ.ವಿ.ಇಂಚರ, ಜಿ.ತ್ರಿಶಾ ಪಡೆದಿರುತ್ತಾರೆ. ಉತ್ತಮ ವಿದ್ಯಾರ್ಥಿಯಾಗಿ ಸುಮನ್, ಟಿ.ಪೌಲಿನ್, ಎಂ.ಎಂ.ಸಂಜನಾ ದಮಯಂತಿ, ಆರ್.ದರ್ಶನ್ ಪ್ರಶಸ್ತಿ ಪಡೆದರು. ಸಾಂಸ್ಕೃತಿಕ ವಿಭಾಗದಲ್ಲಿ ಆರ್.ಸಿಂಚನಾ, ರೋಷನ್ ಡೆನೆಲ್ಡಿ ಆಲ್ಮೇಡಾ, ಕ್ರೀಡಾ ವಿಭಾಗದಲ್ಲಿ ಪೃಥ್ವಿ ಪಿ ಶೆಟ್ಟಿ, ಎನ್.ಎಲ್.ದುರ್ಗಾಭವಾನಿ, ಹಿಶಿತಾ ಸೋಮಯ್ಯ, ಎನ್.ಸಿ.ಸಿ ವಿಭಾಗದಲ್ಲಿ ಟಿ.ಪಿ.ಪಲ್ಲವಿ, ಟಿ.ಎಸ್.ವಿನಂತಿ, ರಕ್ಷಾ ತಂಗಮ್ಮ ಮತ್ತು ಪಿ.ಎನ್.ಮೋಕ್ಷ್ ಪಡೆದರು.

# "ದೂರು ಬಿಡಿ, ದಾರಿ ಹುಡುಕಿ"





| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 07

ಸೃಜನಶೀಲತೆ ಎಂಬುದು ಕೇವಲ ಸುಖದ ಸುಪ್ಪತ್ತಿಗೆಯಲ್ಲಿ ಅರಳುವ ಹೂವಲ್ಲ; ಅದು ಕೊರತೆ ಮತ್ತು ನೋವಿನ ಬೆಂಕಿಯಲ್ಲಿ ಅರಳುವ ಕೆಂದಾವರೆ. ಸುಮಾರು ನಾಲ್ಕು ಶತಮಾನಗಳ ಹಿಂದೆ,ಕವಿ ಸರ್ ಜಾನ್ ಹ್ಯಾರಿಂಗ್ಟನ್ ಅರಮನೆಯ ಅನೈರ್ಮಲ್ಯದಿಂದ ಕಂಗೆಟ್ಟಿದ್ದರು.ಆದರೆ ಅವರು ಆ ಪರಿಸ್ಥಿತಿಯನ್ನು ಕಂಡು ಕೇವಲ ಮೂಗು ಮುಚ್ಚಿ ಕೂರಲಿಲ್ಲ. ತಮ್ಮ ಕಾವ್ಯದ ಲೇಖನಿಯನ್ನು ಬದಿಗಿಟ್ಟು, ತಾಂತ್ರಿಕ ಕುತೂಹಲವನ್ನು ಕೈಗೆತ್ತಿಕೊಂಡರು.ಅದರ ಫಲವಾಗಿ ಅವರು ವಾಟರ್ ಕ್ಲೋಸೆಟ್ (ಕಮೋಡ್) ಅನ್ನು ಕಂಡುಹಿಡಿದರು.

ಯಾತನೆಯ ಹಾದಿಯಲ್ಲಿ ಯೋಗಕ್ಷೇಮದ ದಾರಿ ಹುಡುಕಿದ ಅವರ ಈ ಆವಿಷ್ಕಾರವೇ ಇಂದು ಕಾಲು ನೋವಿನಿಂದ ಬಳಲುವ ಕೋಟ್ಯಂತರ ವಯಸ್ಕರಿಗೆ ಕುಳಿತುಕೊಳ್ಳುವ ಸೌಲಭ್ಯ ನೀಡಿ,ಗೌರವಯುತ ಬದುಕನ್ನು ಉಡುಗೊರೆಯಾಗಿ ನೀಡಿದೆ.ಇತಿಹಾಸದ ಈ ರೋಚಕ ಪುಟ ನಮಗೆ ಕಲಿಸುವ ಪಾಠವೆಂದರೆ, ಸಮಸ್ಯೆಗಳೇ ಸಂಶೋಧನೆಯ ಗರ್ಭಗುಡಿ.

ದುರದೃಷ್ಟವಶಾತ್,ಇಂದಿನ ಯುವಶಕ್ತಿ ಸ್ಮಾರ್ಟ್‌ಫೋನ್‌ಗಳ ಮಾಯಾಲೋಕದಲ್ಲಿ ಸಿಲುಕಿ, ಅಡೆತಡೆಗಳು ಎದುರಾದಾಗ ದಾರಿ ಹುಡುಕುವ ಬದಲು ದಿಕ್ಕು ತಪ್ಪುತ್ತಿದೆ. ಕಾಲಹರಣದ ವ್ಯಸನಗಳು ನಮ್ಮೊಳಗಿನ ಜ್ಞಾನದ ದೀಪವನ್ನು ಆರಿಸುತ್ತಿವೆ. ನೆನಪಿಡಿ, ಹ್ಯಾರಿಂಗ್ಟನ್ ಅಂದು ಕೇವಲ ದೂರು ನೀಡುತ್ತಾ ಕುಳಿತಿದ್ದರೆ, ಇಂದು ಮಾನವನ ಮೂಲಭೂತ ಅಗತ್ಯವೊಂದು ಈ ಘನತೆಯನ್ನು ಪಡೆಯುತ್ತಿರಲಿಲ್ಲ. ನಿಮ್ಮ ಸುತ್ತಲಿರುವ ಅನಾನುಕೂಲಗಳನ್ನೇ ಸವಾಲಾಗಿ ಸ್ವೀಕರಿಸಿ; ಏಕೆಂದರೆ ಜಗತ್ತು ನಿಮ್ಮ ಮೌನಕ್ಕೆ ಬೆಲೆ ನೀಡುವುದಿಲ್ಲ, ನಿಮ್ಮ ಕ್ರಿಯಾಶೀಲತೆಗೆ ಮಾತ್ರ ತಲೆಬಾಗುತ್ತದೆ.

ರಣಹೇಡಿಗಳಂತೆ ಸಂಕಷ್ಟಗಳಿಂದ ಪಲಾಯನ ಮಾಡುವ ಬದಲು, ಹ್ಯಾರಿಂಗ್ಟನ್ ಅವರಂತೆ ಸಮಾಜದ ಯಾತನೆಗೆ ಮದ್ದಾಗುವ ಕನಸು ಕಾಣಿ. ನಿಮ್ಮಲ್ಲಿರುವ ಅಪ್ರತಿಮ ಸಾಮರ್ಥ್ಯವನ್ನು ವ್ಯರ್ಥ ಮಾಡದೆ, ಸೃಜನಶೀಲತೆಯ ಹಾದಿಯಲ್ಲಿ ನಡೆಯಿರಿ. ನಿಮ್ಮ ಒಂದು ಸಣ್ಣ ಸಕಾರಾತ್ಮಕ ಬದಲಾವಣೆ ಇನ್ನೊಬ್ಬರ ಬದುಕಿನಲ್ಲಿ ಹೊಸ ಬೆಳಕನ್ನು ಮೂಡಿಸಲಿ. ಈ ಮೊಬೈಲ್ ಮತ್ತು ವ್ಯರ್ಥ ಹರಟೆಗಳು ನೀಡುವ ತಾತ್ಕಾಲಿಕ ಸುಖಕ್ಕಿಂತ, ಒಂದು ಉಪಯುಕ್ತ ಆವಿಷ್ಕಾರ ನೀಡುವ ತೃಪ್ತಿ ದೊಡ್ಡದು. ಇಂದೇ ಎದ್ದೇಳಿ, ಸವಾಲುಗಳನ್ನು ಸ್ವಾಗತಿಸಿ, ನಿಮ್ಮ ಯಶಸ್ಸಿನ ಕಾವ್ಯವನ್ನು ನೀವೇ ಬರೆಯಲು ಆರಂಭಿಸಿ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,